ಅಪರಂಜಿ

ಏಪ್ರಿಲ್ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಭಕ್ತ

ಶಿವು

ಕೃಷ್ಣ ಸುಬ್ಬರಾವ್

ಪ್ರಕಾಶ್

ಬೇಲೂರು ರಾಮಮೂರ್ತಿ

ಬಿ.ಆರ್. ನಾಗೇಶ್

ವನಜ ಚಂದ್ರಶೇಖರ್

ಕಂ.ಭಂ. ಕೃಷ್ಣಮೂರ್ತಿ

ಹೆಚ್. ಗೋಪಾಲಕೃಷ್ಣ


ಬಿಡಿ ಪ್ರತಿ: ರೂ. 5.00

With Best Compliments from:

[illegible]

No. 2, 3rd Cross, Kalasipalyam,
New Extention
Bangalore - 560 002.

Grams : Equipments	:	Tel : 2222301 Fax : 080-2224497
Distributors For	:	ASPEE Sprayers and Dusters for Agriculture And Horticulture.
CONSIGNMENT AGENTS FOR	:	M/S DSM ENGINEERING PLASTICS (INDIA) PVT. LTD.



Thermoplastic Ploystar Granules (CENKITE)
Polyamide Granules (CENKALON)



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:

ಬಿಡಿ ಪ್ರತಿ:	ರೂ. 5.00
ವಾರ್ಷಿಕ ಚಂದಾ	ರೂ. 60
ಹತ್ತು ವರ್ಷದ ಚಂದಾ	ರೂ. 500

Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಏಪ್ರಿಲ್ - 2003 ಸಂಚಿಕೆ - 7

ಮುದ್ರಣ: ಇಂಪ್ರೆಶನ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

ಲಾಟರಿ ನಿಷೇಧವಿಲ್ಲ
- ಹೇಳಿಕೆ, ಮಂತ್ರಿವರ್ಯರು

ಬಡವರ ಆಶಾಕಿರಣವನ್ನೇ ಮೂಲಧನ ಎನ್ನುವ ಗತಿ ಬಂತೆ
ಎಂದು ಅಪರಂಜಿ ಮರುಗಿದಳಂತೆ!!

★★★

ಮಾಜಿ ಮುಖ್ಯಮಂತ್ರಿಗಳ ಬಗ್ಗೆ ಕೀಳು ಆರೋಪಕ್ಕೆ ಖಂಡನೆ
- ಸುದ್ದಿ

ಹೌದು, ಅವರ ಮಟ್ಟಕ್ಕೇ ಖಂಡನೆಯೂ ಏರಬೇಕು!!

★★★

ವಿಶ್ವಕಪ್ ಒಂದು ಕೆಟ್ಟ ಕನಸು
- ಶೋಯಬ್ ಅಖ್ತರ್

ಟೆಂಡೂಲ್ಕರ್‌ಗೆ ಹಾಗೆ ಕಾಣದಿದ್ದುದು ವಿಷಾದಕರ!

★★★

ಪಾಕ್ ಕನಸು ನುಚ್ಚುನೂರು, ಇಂಗ್ಲೆಂಡ್ ಹೃದಯ ಚೂರು ಚೂರು
- ಶೀರ್ಷಿಕೆ

ಇದೇನು ಬುಷ್-ಸದಾಂ ಬಗ್ಗೆಯೋ??

★★★

ಆರೋಗ್ಯ ಕೇಂದ್ರಗಳ ಅಭಿವೃದ್ಧಿಗೆ 790 ಕೋಟಿ ಯೋಜನೆ
- ಸುದ್ದಿ

ಹಣವನ್ನ ಆರೋಗ್ಯಕರವಾಗಿ ಉಪಯೋಗಿಸಲಿ!!

★★★

ಬೆಂಗಳೂರು: ರೈಲು ಆಧಾರಿತ ಸಂಚಾರ ವ್ಯವಸ್ಥೆಗೆ ಯೋಜನಾ ವರದಿ
- ಸುದ್ದಿ

ಯೋಜನೆ ಮೈಲಾರಕ್ಕೆ ಯಾವಾಗ ಬರುತ್ತದೋ?

★★★

ಒಬ್ಬ ಅಧಿಕಾರಿಗೆ ಮೂರು ಹುದ್ದೆ
- ಗುಲ್ಬರ್ಗ ಸುದ್ದಿ


ಆಧುನಿಕ ಬ್ರಹ್ಮ!!

★★★

ಕಾರುಗಳ ಬೆಲೆ ಇಳಿತ; ಪೆಟ್ರೋಲ್ ಬೆಲೆ ಗಗನಕ್ಕೆ
- ಸುದ್ದಿ

ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ.....!!

★★★



ಎಂಭತ್ತರ ದಶಕ. ಆ ದಿನಗಳಲ್ಲಿ ನನ್ನ ಸಹಪಾಠಿ ದಾಸ (ಉರುಫ್ ಬೊಗಳೆ ದಾಸ) ಬಾಗ್ದಾದಿನಲ್ಲಿ ಕೆಲಸ ಮಾಡುತ್ತಿದ್ದ. ವೃತ್ತಿಯಲ್ಲಿ ಇಂಜಿನಿಯರಾಗಿದ್ದ ದಾಸ ಮೊದಲು ಕೆಲಸಕ್ಕೆ ಸೇರಿದ್ದು ಎಂ.ಇ.ಐ.ನಲ್ಲಿ. ಹಲವು ವರ್ಷಗಳು ಅವನು ಅಲ್ಲಿ ಕೆಲಸ ಮಾಡಿದ ಮೇಲೆ ಆ ಫ್ಯಾಕ್ಟರಿ ಮುಚ್ಚುವ ಸ್ಥಿತಿ ತಲುಪಿತು. (ದಾಸನಿಂದಾಗಿಯೇ ಅಂತ ಹಲವು ಕುಹಕಿ ಮಿತ್ರರ ಅಂಬೋಣ). ಬೇರೆ ಮಾರ್ಗವಿಲ್ಲದೇ ಅಂದಿನ ದಿನಗಳಲ್ಲಿ ಮಧ್ಯ ಪ್ರಾಚ್ಯಕ್ಕೆ ಕೆಲಸಕ್ಕಾಗಿ ವಲಸೆ ಹೊರಟಿದ್ದ ಅಸಂಖ್ಯಾತ ಇಂಜಿನಿಯರುಗಳ ಗುಂಪಿನಲ್ಲಿ ದಾಸನೂ ಸೇರಿಕೊಂಡ. ಅನಂತರ ಹಲವು ವರ್ಷಗಳ ಕಾಲ ಅವನೊಂದಿಗಿನ ಸಂಪರ್ಕ ಕಡಿಯಿತು. ಒಂದು ಬೆಳಿಗ್ಗೆ ಫೋನ್ ರಿಂಗಾಗಿ ಆಚೆ ಬದಿಯಿಂದ ''ಸೇವಂತಿಗೆ ನನ್ನ ಮುದ್ದು ಕೋಳಿ'' ಎಂಬ ಭಾವಗೀತೆ ತೇಲಿ ಬಂದಾಗ ಬಹು ಸಂಭ್ರಮದಿಂದಲೇ ನಾನು ದಾಸನೊಂದಿಗೆ ಭೇಟಿ ಮಾಡಲು ಅನುವಾಗಿ ಅಂದು ಸಂಜೆ ನಮ್ಮ ಕ್ಲಬ್ಬಿಗೆ ಬರುವಂತೆ ಅವನನ್ನು ಆಹ್ವಾನಿಸಿದೆ. ಅಂದಹಾಗೆ ಮಿಕ್ಕ ಅನೇಕ ಕಲೆಗಳ ಜೊತೆಗೆ ದಾಸ ಕನ್ನಡ ಭಾವಗೀತೆಗಳನ್ನೂ ಬಹು ಸುಶ್ರಾವ್ಯವಾಗಿ ಹಾಡುತ್ತಿದ್ದ. ಸೇವಂತಿಗೆ ಅವನ ಟ್ರೇಡ್ ಮಾರ್ಕ್ ಟ್ಯೂನ್.

ಸಂಜೆ ಕ್ಲಬ್ಬಿನಲ್ಲಿ ಮಿತ್ರರೆಲ್ಲಾ ಸೇರಿದಾಗ ಸಹಜವಾಗಿಯೇ ಬಹುಕಾಲದ ನಂತರ ಆಪ್ತ ಮಿತ್ರನೊಬ್ಬನನ್ನು ನೋಡುವ ಉತ್ಸುಕತೆ ಎಲ್ಲರಲ್ಲೂ ತುಂಬಿತ್ತು. ''ಇಂದಿನ ಪಾನಕ ಪೂಜೆಗೆ ನನ್ನ ನಮ್ರ ಕಾಣಿಕೆ'' ಎನ್ನುತ್ತಾ ತಾನು ವಿದೇಶದಿಂದ ತಂದಿದ್ದ ಉಡುಗೊರೆಯೊಂದನ್ನು ಮೇಜಿನ ಮೇಲಿಟ್ಟು ದಾಸ ಕುಳಿತ ತಕ್ಷಣ ಎಲ್ಲರಿಂದಲೂ ಆತ್ಮೀಯ ಕುಶಲ ಪ್ರಶ್ನೆಗಳು ವಿನಿಮಯವಾದವು.

''ಬಾಗ್ದಾದಿನಲ್ಲಿ ಏನು ಮಾಡ್ತಾ ಇದ್ದೀಯಾ? ಭಾರತೀಯರು ಬಹಳ ಇದ್ದಾರೇನು?'' ಎಂಬೆಲ್ಲಾ ಪ್ರಶ್ನೆಗಳು ಪಟಪಟನೆ ಹಾರಾಡಿದವು. ದಾಸ ತನ್ನ ವಿವರಣೆ ಪ್ರಾರಂಭಿಸಿದ.

''ಬಾಗ್ದಾದಿನಲ್ಲಿ ನಾನು ಒಂದು ಕಾರ್ಖಾನೆಯ ಟ್ರೈನಿಂಗ್ ಸೆಂಟರಿನಲ್ಲಿ ಕೆಲಸ ಮಾಡುತ್ತಿದೀನಿ. ಸುಮಾರಾಗಿ ಅರಾಬಿಕ್ ಕಲಿತಿರೋದರಿಂದ ಅಲ್ಲಿನ ಜನಗಳ ಜೊತೆ ಸುಲಭವಾಗಿ ಬೆರೆಯೋದು ಸಾಧ್ಯ ಆಗಿದೆ. ಬಹಳ ಒಳ್ಳೆಯ ಜನ ಇರಾಕಿಗಳು. ಭಾರತದ ಸಂಸ್ಕೃತಿ ಬಗ್ಗೆ ತಿಳಿಯೋದಕ್ಕೆ ತುಂಬಾ ಆಸಕ್ತಿ ಅವರಿಗೆ. ಆಯಿಲ್ ರಿಚ್ ದೇಶ ಆಗಿರೋದ್ರಿಂದ ನಮ್ಮಲ್ಲಿರೋ ಹಾಗೆ ಕಡು ಬಡತನಾ ಏನೂ ಕಾಣಿಸುಲ್ಲ. ಅಲ್ದೆ ಸದ್ದಾಮ್ ಹುಸೈನ್ ಅಧ್ಯಕ್ಷ ಪದವಿ

ವಹಿಸಿಕೊಂಡಾಗಿನಿಂದ ಕೈಗಾರಿಕೆಗಳಿಗೆ ಮಹತ್ವ ಕೊಟ್ಟು ಇರಾಕ್‌ನ ಸಂಪನ್ಮೂಲಗಳನ್ನ ವೃದ್ಧಿಪಡಿಸೋದ್ರಲ್ಲಿ ಬಹಳ ಯಶಸ್ಸನ್ನು ಪಡೆದಿದಾನೆ ಅಂತ ಹೇಳ್ತೋದು.''

''ಡಿಸ್ಟ್ರಿಬ್ಯೂಷನ್ ಆಫ್ ವೆಲ್ತ್ ಹೇಗಿದೆ ಆ ದೇಶ್ದಲ್ಲಿ.''

''ಬಾತ್ ಪಾರ್ಟಿ ಅಧಿಕಾರಕ್ಕೆ ಬಂದಮೇಲೆ ಟ್ರೈಬಲ್ ಕಲಹಗಳನ್ನ ಹತ್ತಿಕ್ಕಿ ದೇಶಕ್ಕೆ ಒಂದು ಸಾಮಾಜಿಕ ಸ್ಥಿರತೆ ತರುಕ್ಕೆ ಪ್ರಯತ್ನ ಪ್ರಾರಂಭಿಸಿದ್ರು. ಈಗ ಹುಸೈನ್ ಆಡಳಿತಾನ ಬಿಗಿಪಡಿಸಿ ಆಧುನಿಕ ಇನ್‌ಸ್ಟಿಟ್ಯೂಷನ್‌ಗಳನ್ನ ಸಾಮಾಜಿಕ ನ್ಯಾಯದ ಹಾದಿಯಲ್ಲಿ ದುಡಿಸಿಕೊಳ್ಳೋದಕ್ಕೆ ಶುರು ಮಾಡಿದಾನೆ. ಇದರಿಂದ ಖಂಡಿತ ಜನರ ಜೀವನದ ಮಟ್ಟ ಸುಧಾರಿಸಿದೆ ಅನ್ನಬೋದು.''

''ಅಂದ್ರೆ, ಬಿನೈನ್ ಡಿಕ್ಟೇಟರ್ ಅಂತಾರಲ್ಲಾ....''

''ಹಾಗೂ ಹೇಳ್ಬೋದು. ಅವನಿಗೆ ವಿರುದ್ಧವಾಗಿ ಹೋಗ್ದೆ ಇದ್ರೆ ಬಿನೈನೇ. ವಿರುದ್ಧ ಹೋದ್ರೋ ಅವರ್ನ ರೂತ್ ಲೆಸ್ ಆಗಿ ಮುಗಿಸಿಬಿಡ್ತಾನೆ. ಕಳೆದ ತಿಂಗಳು ಅದರ ಪ್ರತ್ಯಕ್ಷ ಅನುಭವ ಆಯ್ತು ನನಗೆ.''

''ಏನಾಯ್ತೋ ಅಂಥದ್ದು?''

''ಅದೊಂದು ಬುಧವಾರ ಮಧ್ಯಾಹ್ನ. ಹೆಂಡ್ತಿ ಕಟ್ಟಿಕೊಟ್ಟ ಕ್ಯಾರಿಯರ್ ಊಟ ಮುಗಿಸಿ, ನನ್ನ ಆಫೀಸಿನಲ್ಲಿ ಕೂತಿದ್ದೆ. ಮುಂದಿನ ಟೇಬಲ್ಲಿನಲ್ಲಿ ನನ್ನ ಇರಾಕಿ ಪಿ.ಎ. ಕುಳಿತಿದ್ದಳು. ಅವಳ ಸಹಾಯದಿಂದ್ಲೇ ನಾನು ಅಷ್ಟು ಸರಾಗವಾಗಿ ಅರಾಬಿಕ್ ಮಾತನಾಡಲು ಸಾಧ್ಯ ಆಗಿದ್ದು. ಒಮ್ಮೆಲೇ ಅವಳ ಟೇಬಲ್ಲಿನ ಫೋನ್ ರಿಂಗ್ ಆಯಿತು. ಆಚೆ ಬದಿಯಿಂದ ಯಾರೋ ಮಾತನಾಡಿದ್ದನ್ನು ಕೇಳಿಸಿಕೊಂಡು ಆಕೆಯ ಮುಖ ಬಿಳಿಚಿಹೋಯಿತು. ಫೋನ್ ಇಟ್ಟಮೇಲೆ, ''ಏನು ಸಮಾಚಾರ?'' ಅಂತ ಅವಳನ್ನ ಕೇಳಿದೆ.

ಆಕೆ ಹೆದರುತ್ತಾ ''ನಿಮಗೆ ಇದನ್ನ ಹೇಗೆ ತಿಳಿಸೋದು ಅಂತಾನೇ ತಿಳೀತಾಯಿಲ್ಲ. ನಮ್ಮ ಫ್ಯಾಕ್ಟರಿಯ ಕಾರ್ಮಿಕ ಒಬ್ಬ ಟಾಯ್ಲೆಟ್ಟಿನಲ್ಲಿ ಸದ್ದಾಮ್ ಬಗ್ಗೆ ಕೀಳಾಗಿ ಮಾತನಾಡಿದ್ನಂತೆ. ಆ ಮಾತನ್ನ ಬಾತ್ ಪಾರ್ಟಿ ಮೆಂಬರ್ ಒಬ್ಬ ಕೇಳಿಸಿಕೊಂಡುಬಿಟ್ಟನಂತೆ. ಇವತ್ತು ಮಧ್ಯಾಹ್ನ ಅವನ ಮೇಲೆ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ತಾರಂತೆ. ಮೂರು ಘಂಟೆಗೆ ಸೈರನ್ ಆದ ತಕ್ಷಣ ಎಲ್ಲರೂ ಅಸೆಂಬ್ಲಿ ಷಾಪಿನಲ್ಲಿ ಒಟ್ಟುಗೂಡಬೇಕಂತೆ. ಯಾರೂ ಈ ಸಭೆಗೆ ತಪ್ಪಿಸಿಕೊಳ್ಳೋ ಹಾಗಿಲ್ಲವಂತೆ. ನೀವು ವಿದೇಶೀ ಎಕ್ಸಿಕ್ಯೂಟಿವ್ ಆಗಿರೋದ್ರಿಂದ ಭಾಗವಹಿಸೋದಕ್ಕೆ ನಿಮಗೆ ಬಲವಂತ ಏನೂ ಇಲ್ಲ'' ಅಂತ ಹೇಳಿದಳು.

ನನಗೋ ಕುತೂಹಲ. ಸೈರನ್ ಆದ ತಕ್ಷಣ ನಾನೂ ಕೂಡ ಅಸೆಂಬ್ಲಿಷಾಪಿಗೆ ಹೋದೆ. ಇಡೀ ಕಾರ್ಖಾನೆ ಅಲ್ಲಿ ನೆರೆದಿತ್ತು. ಮಧ್ಯಭಾಗದಲ್ಲಿ ಸ್ವಲ್ಪ ಜಾಗ ಖಾಲಿ ಮಾಡಿ ಅಲ್ಲಿ ಆ ಬಡಪಾಯಿ ಕಾರ್ಮಿಕನ್ನ ನಿಲ್ಲಿಸಿದ್ದರು. ನೋಡುತ್ತಾ ಇದ್ದ ಹಾಗೆ, ಪಬ್ಲಿಕ್ ಅಡ್ರೆಸ್ ವ್ಯವಸ್ಥೆಯಿಂದ ಫ್ಯಾಕ್ಟರಿ ಸೆಕ್ಯೂರಿಟಿ ಅಧಿಕಾರಿಯ ಧ್ವನಿ ಮೂಡಿಬಂತು. ''ಇಂಥೋನು ನಮ್ಮ ಅಧ್ಯಕ್ಷರಿಗೆ ಅಪಚಾರ ಎಸಗಿರೋದ್ರಿಂದ ಅವನಿಗೆ ಮರಣದಂಡನೆ''. ನಾನು ಆ ಮಾತನ್ನ ಅರಗಿಸಿಕೊಳ್ತಿರೋವಾಗ್ಲೇ ಎರಡು ಫೋರ್ಕ್ ಲಿಫ್ಟ್ ಟ್ರಕ್‌ಗಳು ಬಂದು ಅವನ ಎರಡು ಬದಿಯಲ್ಲಿ ವಿರುದ್ಧ ದಿಕ್ಕುಗಳನ್ನು ಇದಿರುಸುತ್ತಾ ನಿಂತವು. ಒಬ್ಬ ಸೆಕ್ಯುರಿಟಿ ಅಧಿಕಾರಿ ಬಂದು ಅಪರಾಧಿಯ ಎಡಗೈ ಮತ್ತು ಎಡಗಾಲುಗಳನ್ನು ಎಡಗಡೆಯ ಫೋರ್ಕ್ ಲಿಫ್ಟ್‌ಗೆ ಕಟ್ಟಿದ. ಅವನ ಬಲಗೈ ಬಲಗಾಲುಗಳು ಬಲಗಡೆಯ ಟ್ರಕ್ಕಿಗೆ ಬಂಧಿತವಾದವು. ನೋಡುತ್ತ ನೋಡುತ್ತಲೇ ಲೌಡ್ ಸ್ಪೀಕರಿನಿಂದ ''ಸ್ಟಾರ್ಟ್'' ಎಂಬ ಕೂಗು ಕೇಳಿಬಂತು. ಎರಡು ಟ್ರಕ್‌ಗಳೂ ವಿರುದ್ಧ ದಿಕ್ಕುಗಳಲ್ಲಿ ಚಲಿಸಲಾರಂಭಿಸಿದವು. ಆಮೇಲೆ ಒಂದು ಫೈರ್ ಇಂಜಿನ್ ಬಂದು ದೊಡ್ಡ ನೀರಿನ ಕೊಳವೆಯಿಂದ ನೆಲವನ್ನೆಲ್ಲಾ ಶುಚಿಗೊಳಿಸಿ ಹೊರಟುಹೋಯಿತು. ಎಲ್ಲ ಕಾರ್ಮಿಕರೂ ತಮ್ಮ ತಮ್ಮ ಕಾರ್ಯಸ್ಥಾನಗಳಿಗೆ ಹೊರಟು ಹೋದರು'' ನನಗಂತೂ ಅಂದು ಸಂಜೆವರೆಗೂ ಕಾಲು ನಡುಕ ನಿಲ್ಲಲೇ ಇಲ್ಲ.''

ಒಂದೆರಡು ನಿಮಿಷ ಯಾರೂ ಮಾತನಾಡಲಿಲ್ಲ.

ಕೊನೆಗೆ ''ಅಬ್ಬ ಎಂತಹ ಕ್ರೌರ್ಯ. ಇದರ ವಿರುದ್ಧ ಯಾರೂ ದಂಗೆ ಏಳುಲ್ಲವೇನೋ?'' ಅಂತ ರೆಡ್ಡಿ ಕೇಳಿದ.

ಸಾಧಾರಣವಾಗಿ ನಗುನಗುತ್ತಾ ಇರುತ್ತಿದ್ದ ದಾಸನ ಕಣ್ಣಿನಲ್ಲಿ ಆ ಕ್ಷಣ ಕೋಪದ ಕಿಡಿ ಕಂಡಿತು. ''ಹ್ದ ಹ್ದ ದಂಗೆ ಅಂತೆ ದಂಗೆ. ನೀವುಗಳೇ ಅಲ್ವೇನ್ರೋ ಇಂದ್ರಾಗಾಂಧೀ ಎಮರ್ಜೆನ್ಸಿ ತಂದಾಗ ಬಗ್ಗಿ ಅಂದ್ರೆ ತೆವಳುಕ್ಕೆ ಶುರು ಮಾಡಿದೋರು. ಏನೋ ನೆಹ್ರು ವಂಶದೋಳಾಗಿದ್ದರಿಂದ ಸ್ವಲ್ಪನಾದ್ರು ಸಂಸ್ಕೃತಿ ಇತ್ತು. ವಿರೋಧ ಪಕ್ಷದೋರ್ನ ಸುಮ್ನೆ ಜೈಲಿನಲ್ಲಿ ಹಾಕಿ ಆಮೇಲೆ ಚುನಾವಣೆ ಘೋಷಿಸಿದ್ಲು. ಬದಿಕ್ಕೊಂಡ್ವಿ. ಸದ್ದಾಮ್ ಆಗಿದ್ರೆ ವಿರೊಧಿಸಿದೋರ್ನೆಲ್ಲಾ ಮುಖಾಮೂತಿ ನೋಡ್ದೆ ಲಿಕ್ವಿಡೇಟ್ ಮಾಡಿ ಡಿಕ್ಟೇಟರ್ ಷಿಪ್ ತಂದ್ಬಿಡ್ತಿದ್ದ. ರೂತ್ಲೆಸ್ ಡಿಕ್ಟೇಟರುಗಳ ಮುಂದೆ ದಂಗೆ ಸುಲಭ ಅಲ್ಲ ಮರಿ. ಮರುಭೂಮಿಲಿ ಮಾವಿನ ತೋಪು ಬೆಳೆಸೋ ಅಷ್ಟೇ ಕಷ್ಟ ಅದು.''


''ಪುನಃ ಇರಾಕಿಗೆ ಹೋಗ್ತೀಯಾ ದಾಸ?'' ರಮೇಶನ ದನಿಯಲ್ಲಿ ಆತಂಕದ ಛಾಯೆ.

''ಅನ್ನ ಕೊಟ್ಟ ದೇಶ ಅದು. ಅಲ್ದೆ ಕೆಲಸದ ಪರಿಸರ ಚೆನ್ನಾಗೇ ಇದೆ. ನನ್ನ ಕಂಪ್ರ್ರೆ ನಮ್ಮ ಜಿ.ಎಂ.ಗೆ ಬಹಳ ವಿಶ್ವಾಸ. ಹೋಗ್ದೆ ಏನು ಮಾಡ್ಲಿ'' ಅಂದ ದಾಸ.

ದಾಸ ಇರಾಕಿಗೆ ಹಿಂತಿರುಗಿದ ನಂತರ ಪುನಃ ಒಂದೆರಡು ಬಾರಿ ಬೆಂಗಳೂರಿಗೆ ಭೇಟಿ ನೀಡಿದ್ದರೂ, ನನಗೆ ಅವನನ್ನು ನೋಡಲು ಆಗಿರಲಿಲ್ಲ.

ಈಗಲೂ ಒಮ್ಮೊಮ್ಮೆ ಬೆಳಗ್ಗೆ ಫೋನ್ ರಿಂಗಾದರೆ ಆಚೆ ಬದಿಯಿಂದ ''ಸೇವಂತಿಗೆ'' ಹಾಡು ಕೇಳಿಬರುತ್ತೇನೋ ಅಂದುಕೊಂಡೇ ರಿಸೀವರ್ ಎತ್ತೋಹಾಗೆ ಆಗುತ್ತೆ.

– ಶಿವಕುಮಾರ್



ಅಂಗಳದಲ್ಲಿನ ಒಣ ಮರ

– ಭಕ್ತ

ಅರುವತ್ತಾರನೆಯ ಇಸವಿಯ ಸುಮಾರಿನಲ್ಲಿ ನಾವು ಒಂದು ಬಾಡಿಗೆಯ ಮನೆಯಲ್ಲಿ ವಾಸಿಸುತ್ತಿದ್ದೆವು. ನಮ್ಮ ಮೊದಲ ಮಗ ಹುಟ್ಟಿದ ವರ್ಷ ಅದು. ಒಬ್ಬ ಬಾಡಿಗೆದಾರನಿಂದ ನಾವು ಆ ಮನೆಯನ್ನು ಮರುಬಾಡಿಗೆಗೆ ಪಡೆದಿದ್ದೆವು. ಆತ ಮನೆ ಕೊಡುವ ಸಮಯದಲ್ಲಿ ಅಲ್ಲಿನ ಅಂಗಳದಲ್ಲಿ ತಾನೇ ನೆಟ್ಟು ಬೆಳೆಸಿದ್ದ ಕೆಂಜಿಗೆ ಮರವೊಂದನ್ನು ಕಾಪಾಡಿಕೊಂಡು ಬರುವಂತೆ ನಮಗೆ ಆಗ್ರಹಪೂರ್ವಕವಾಗಿ ಹೇಳಿದ್ದ. ಅವನಿಗಿಂತ ನಾನೇನು ಕಡಿಮೆ ಎಂದುಕೊಂಡು ನಾನು ಆ ಮರದ ಜೊತೆಗೆ ಇರಲಿ ಅಂತ ನನ್ನದೇ ಹಲವು ಸಸಿಗಳನ್ನು ನೆಟ್ಟು ಬೆಳೆಸುವ ನಿರ್ಧಾರ ಮಾಡಿದೆ.

ಸಸ್ಯಕಾಶಿಯಾದ ಲಾಲ್‌ಬಾಗ್‌ಗೆ ಹೋಗಿ ಅಲ್ಲಿನ ತಜ್ಞರ ಸಲಹೆ ಕೇಳಿ ಕ್ಯಾಸಿಯಾ ಜವನಿಕಾ ಗಿಡದ ಹತ್ತು ಸಸಿಗಳನ್ನು ತಂದು ನನ್ನ ಮಲಗುವ ಮನೆಯ ಪಕ್ಕದ ಗೋಡೆಯ ಬದಿಯಲ್ಲಿ ನೆಟ್ಟಿದ್ದಾಯಿತು. ಹತ್ತರಲ್ಲಿ ಒಂದು ಸಸಿ ಚೆನ್ನಾಗಿ ಬೇರುಬಿಟ್ಟು ಬೆಳೆಯಲು ಪ್ರಾರಂಭಿಸಿತು. ಬಹುಬೇಗನೇ, ಆ ಮರದ ರೆಂಬೆ, ಎಲೆಗಳು ಕಿಟಕಿಯ ಮೂಲಕ ನನಗೆ ಸುಪ್ರಭಾತ ಕೋರತೊಡಗಿದವು. ಮರದ ಎಲೆಗಳು ನಮ್ಮ ಕೋಣೆಗೆ ನೆಳಲು ಬೆಳಕಿನ ಕಣ್ಣುಮುಚ್ಚಾಲೆ ನಡೆಸುವ ನೋಟ ಚೆನ್ನಾಗಿದ್ದರೂ ಆ ಮರದಿಂದ ಹೊರಹೊಮ್ಮುವ ವಿಚಿತ್ರ ಗಂಧ ಮಾತ್ರ ನಿಜಕ್ಕೂ ತಲೆನೋವು ತರಿಸುವ ಸಾಮರ್ಥ್ಯ ಪಡೆದಿತ್ತು.

ಒಂದೇ ಸಮಾಧಾನವೆಂದರೆ ಆ ಮರ ವರ್ಷಕ್ಕೊಮ್ಮೆ ಹಲವು ದಿನಗಳ ಮಟ್ಟಿಗೆ ಸುಂದರವಾದ ಹಳದಿ ಹೂವುಗಳನ್ನು ತಳೆದು ನಿಲ್ಲುತ್ತಿತ್ತು. ಬೆಂಗಳೂರಿನ ಚಳಿಗಾಲದಲ್ಲಿ ಈ ಹೂವುಗಳು ನಯನಮನೋಹರವಾಗಿದ್ದರೂ ಮರ ಸೂಸುತ್ತಿದ್ದ ವಾಸನೆಯನ್ನು ಮಾತ್ರ ತಡೆಯಲಾಗುತ್ತಿರಲಿಲ್ಲ. ಮನೆ ಬಿಟ್ಟು ಹೊರಗೆ ಕಾಲಿಟ್ಟಾಗಲೂ, ವಾಸನೆ ಮಾತ್ರ ಉಟ್ಟ ಬಟ್ಟೆಯನ್ನೆಲ್ಲಾ ಆವರಿಸಿದಂತೆ ಕಾಣುತ್ತಿತ್ತು. ಆದರೂ ಹೊರವಾಗಿ ಬೆಳೆಯುತ್ತಿದ್ದ ಆ ಮರದ ಧಾಷ್ಟ್ಯವನ್ನು ನಾನು ಮೆಚ್ಚಿಕೊಂಡಿದ್ದೆ.

ಎಪ್ಪತ್ತೊಂದರಲ್ಲಿ ನಾನು ನಮ್ಮ ಮನೆಯನ್ನು ವಿಸ್ತರಿಸಲು ನಿರ್ಧರಿಸಿದೆ. ಈ ಹಂಚಿಕೆಯನ್ನು ಕಾರ್ಯಗತಗೊಳಿಸಲು ಜವನಿಕಾ ಮರವನ್ನು ಕಡಿದು ಹಾಕುವುದು ಅನಿವಾರ್ಯವಾಯಿತು. ಬದಲಿಗೆ ಹಲವು ಹೊಸ ಸಸಿಗಳನ್ನು ತಂದು ಮನೆಯ

ಮುಂದೆ ನೆಟ್ಟಿದ್ದಾಯಿತು. ಆದರೂ ಮರ ಕಡಿದು ಅದರ ಹೊಂಡದಲ್ಲಿ ಕಾಂಕ್ರೀಟ್ ಸುರಿಯುವ ಕೆಲಸವನ್ನು ನಮ್ಮ ಕಂಟ್ರ್ಯಾಕ್ಟರಿಗೆ ವಹಿಸಿ ಆ ಪಾಪದಿಂದ ಬಿಡುಗಡೆ ಪಡೆಯುವ ವ್ಯರ್ಥ ಯತ್ನವೂ ನಡೆಯಿತೆನ್ನಿ.

ಮೂರು ತಿಂಗಳ ವಿದೇಶ ಯಾತ್ರೆಯಿಂದ ನಾನು ಹಿಂತಿರುಗಿದಾಗ ಜವನಿಕಾದ ಸುಳಿವೇ ಇರಲಿಲ್ಲ. ಅದರ ಜಾಗದಲ್ಲಿ ಕಾಂಕ್ರೀಟ್‌ನ ಸುರುಳಿ ಮೆಟ್ಟಿಲುಗಳು ಭದ್ರವಾಗಿ ನಿಂತಿದ್ದವು. ಹಲವು ದಿನಗಳ ನಂತರ ಒಮ್ಮೆ ನೋಡಿದಾಗ ಮೆಟ್ಟಿಲಿನ ಅಡಿಯಿಂದ ಒಂದು ಸಸಿ ಹಣುಕುತ್ತಿತ್ತು. ಅದರ ಎಲೆಗಳು ಜವನಿಕಾದ ಎಲೆಗಳಂತೆಯೇ ಕಾಣುತ್ತಿದ್ದವು. ಹತ್ತಿರದಿಂದ ನೋಡಿದಾಗ ಯಾವ ಸಂಶಯವೂ ಉಳಿಯಲಿಲ್ಲ. ಅಷ್ಟು ಘಾಟಿನ ವಾಸನೆ. ಆ ದಿನ ನನ್ನ ಹೆಂಡತಿ ಅತ್ತೂ ಕರೆದು ರಂಪ ಎಬ್ಬಿಸಿದಳು. ತನ್ನ ಎಲ್ಲಾ ಸಂಕಟಗಳನ್ನೂ ಆ ಮರಕ್ಕೆ ಹೋಲಿಸಿ, ತನ್ನ ಮದುವೆಯೊಂದಿಗೆ ಹುಟ್ಟಿದ ಆ ಮರ ಮದುವೆಯಂತೆಯೇ ಸೊರಗಿರುವುದನ್ನು ಬಣ್ಣಿಸಿ ಕೊರಗಿದಳು.

ಮುಂದಿನ ಆರು ತಿಂಗಳ ಕಾಲ ನಾವು ಆ ಮರವನ್ನು ಬಹು ಜಾಗರೂಕತೆಯಿಂದ ವೀಕ್ಷಿಸಿದೆವು. ಕಾಂಕ್ರೀಟಿನ ಸಂದಿನಿಂದ ಆ ಮರ ತನ್ನ ಇರುವಿಕೆಯನ್ನು ಛಾತಿಯಿಂದಲೇ ಸಾಧಿಸತೊಡಗಿತು. ಬೂದಿಯಿಂದ ಹೊರ ಹೊಮ್ಮಿದ ಫೀನಿಕ್ಸ್‌ನಂತೆ ಅದು ದಿನದಿನಕ್ಕೂ ಮೆಟ್ಟಿಲಿನ ಬಂಧನದಿಂದ ಹೊರಬಂದು ಬೆಳಗಿನಂದು ಸೂರ್ಯ, ಸಂಜೆಗೆ ಚಂದ್ರನತ್ತ ತನ್ನ ತುದಿಯನ್ನು ಚಾಚುವ ಸನ್ನಾಹ ಮಾಡಿತ್ತು ಆ ಸಸಿ.


ದಿನ ಕ್ರಮೇಣ ಅದರ ಕಾಂಡ ನಾವು ಹೊಸದಾಗಿ ನೆಟ್ಟ ಸಸಿಗಳಿಗಿಂತ ಹೆಚ್ಚು ದಪ್ಪನಾಗಿ ಬೆಳೆಯಿತು. ಮರದ ಎಲೆಗಳು, ರೆಂಬೆಗಳು ದಷ್ಟಪುಷ್ಟವಾದವು. ಆದರೂ ಕಾಂಕ್ರೀಟ್ ಮೆಟ್ಟಿಲಿನ ಅಡಚಣೆ ಇದ್ದುದರಿಂದ ಮರ ಬಗ್ಗಿಕೊಂಡೇ ಬೆಳೆಯಬೇಕಾಯಿತು. ಬೆಳೆದು ನಿಂತ ಮರದ ಎಲೆಗಳೆಲ್ಲಾ ಈಗ ಉದುರಿವೆ. ಹಸಿರೇ ಇಲ್ಲದ ಒಣಮರ ಆಗಸದತ್ತ ಮೈಚಾಚಿ ನಿಂತಿದೆ. ಅಷ್ಟೆಲ್ಲ ಖರ್ಚು ಮಾಡಿ ಕಟ್ಟಿಸಿದ ಕಾಂಕ್ರೀಟ್ ಮೆಟ್ಟಿಲುಗಳನ್ನು ತೆಗೆಸಿ ಮರದ ಉಳಿವಿಗೆ ಯತ್ನಿಸಬೇಕೋ ಅಥವಾ ಅದರ ಪಣೇಬರಹ ಅಂತ ಸುಮ್ಮನಾಗಬೇಕೋ ಎಂಬ ಜಿಜ್ಞಾಸೆಯ ತೊಳಲಾಟ ಶುರುವಾಗಿದೆ ನನಗೆ.

ಇದೆಲ್ಲಾ ನಡೆದು ಎರಡು ದಶಕಗಳ ಮೇಲಾಯಿತು. ನಾನು ಸ್ಥಾಪಿಸಿದ ಕಾಂಕ್ರೀಟ್ ಮೆಟ್ಟಿಲುಗಳು ಸಂಗೀತದ ಆಸ್ವಾದನೆಗೆಂದೇ ಕಟ್ಟಿರುವ ಶಂಖಾಕೃತಿಯ ಕೊಠಡಿಯನ್ನು ಸಂಪರ್ಕಿಸುತ್ತವೆ. ಅನೇಕ ಖ್ಯಾತ ಸಂಗೀತ ಪಟುಗಳ ಗಾನ ಸುಧೆಯಿಂದ ಆ ಕೊಠಡಿಯ ಗೋಡೆಗಳು ಪ್ರತಿಧ್ವನಿಸಿವೆ. ಇಲ್ಲಿ ಒಮ್ಮೆ ಬೇಗಮ್

ಅಖ್ತರ್ ಹಾಡಿದ್ದಳು. ಈಗ ನಮ್ಮೊಂದಿಗಿಲ್ಲದ ಕಾರಂತರು ಅನೇಕ ಬಾರಿ ಈ ಕೊಠಡಿಗೆ ಭೇಟಿ ನೀಡಿದ್ದರು. ಕಾಲಾತೀತವಾದ ನೆನಪುಗಳಿಂದ ತುಂಬಿದೆ ಈ ಕೊಠಡಿ. ನಮ್ಮ ಅಂಗಳದಲ್ಲಿನ ಒಣಮರ ಈಗ ಹಸಿರಿನಿಂದ ಕಂಗೊಳಿಸುತ್ತಿದೆ. ಅದು ತನ್ನ ಇರವನ್ನು ಛಾತಿಯಿಂದ ತೋರಿಸಿಕೊಂಡಿರುವುದಷ್ಟೇ ಅಲ್ಲ, ಗುರುತ್ವಾಕರ್ಷಣೆಯನ್ನು ಮೀರಿ ಮೆಟ್ಟಿಲ ಕೆಲಗಿನಿಂದ ನುಸಿದು ಹೊರವಾಗಿ ಬೆಳೆದು ಕೊಠಡಿಯ ಬಾಲ್ಕನಿಗೆ ತಾಗಿದಂತೆ ಚಾಚಿ ನಿಂತಿದೆ. ಹಸಿರು ಬಳ್ಳಿಯೊಂದು ಇದನ್ನು ಅಪ್ಪಿ ಬೆಳೆದು, ಅದರ ಕೋಮಲ ಬಾಹುಗಳು ಕಿಟಕಿಯ ಮೂಲಕ ಕೊಠಡಿಯೊಳಗೆ ಇಣುಕುತ್ತಿವೆ. ಮರ ಈಗ ನನಗೆ ನಿತ್ಯ ಸಂಗಾತಿ. ಅನೇಕ ರಾತ್ರಿಗಳು ನಾವಿಬ್ಬರೇ ಇದ್ದಾಗ ಆಕೆ ನನ್ನನ್ನು ಮಾತನಾಡಿಸಿ ಬದಲಾಗುತ್ತಿರುವ ಋತುಗಳನ್ನು ಕುರಿತು ಪಿಸುಗುಟ್ಟುತ್ತಾಳೆ. ಅವಳ ಎಲೆ ಹೂವುಗಳ ಆ ಪಿಸುಮಾತಿಗೆ, ಸುತ್ತಲಿನ ಹಗುರ ಬೆಳದಿಂಗಳು, ಮೆಲ್ಲನೆ ನೇವರಿಸಿ ಪುಳಕಗೊಳಿಸುವ ತಂಗಾಳಿ ಇದೆಲ್ಲಾ ಸಾಟಿ ನೀಡುತ್ತವೆ.

ಒಮ್ಮೊಮ್ಮೆ ಇದೆಲ್ಲಾ ಹೇಗಾಯಿತು ಅನ್ನಿಸುತ್ತದೆ. ನನ್ನ ಆರೈಕೆಯ ಫಲವೋ, ಸಂಗೀತಸುಧೆಯ ಮಧುರ ಪರಿಸರವೋ ಅಥವಾ ಆ ಮರಕ್ಕಿರುವ ಬದುಕಲೇ ಬೇಕೆಂಬ ಅದಮ್ಯ ಛಲವೋ.....

★★★



ವಿಶ್ವಕಪ್

- ಶಿವು

(ಒಂದು ಸಂತೋಷಕೂಟದಲ್ಲಿ ಹಲವು ಗೆಳೆಯರು ಒಟ್ಟುಗೂಡಿಸಿದ್ದಾರೆ. ಮಾತುಕತೆ ಸಹಜವಾಗಿಯೇ ವರ್ಲ್ಡ್‌ಕಪ್ ಕಡೆ ತಿರುಗಿದೆ)

ಕೇಶವ: ಮ್ಯಾಚ್ ಕವರೇಜ್ ಅಂತ ಕಂಡಕಂಡೋರ್ನೆಲ್ಲಾ ಎಕ್ಸ್‌ಪರ್ಟ್ಸ್ ಅಂತ ಕರೆದು ಕೂರಿಸ್ಬಿಡೋದು ಸರಿನೇನೋ ರಾಜು?

ರಾಜು: ಅವ್ರು ಕೂಡ ಏನು ಮಾಡಕ್ಕಾಗುತ್ತೋ. ವರ್ಲ್ಡ್‌ಕಪ್ ಅಂದ್ರೆ ಸಾಮಾನ್ಯಾನಾ. ವಾರಗಟ್ಟಲೆ ದಿನಾ ನಡೆಯುವ ಮ್ಯಾಚುಗಳಿಗೆ ಅವರು ಜನಗಳನ್ನ ಹೊಂದಿಸ್ಬೇಕಲ್ಲ. ಅದ್ಸರೀ, ಕೀನ್ಯಾ ನೋಡು, ಸೆಮಿ ಫೈನಲ್ಸ್‌ಗೆ ಬಂದ್ಬಿಟ್ಟಿದೆ. ಏನು ಆಶ್ಚರ್ಯ ಅಲ್ವಾ. ನೀನೇನಂತೀಯೋ ಷಫಿ.

ಷಫಿ: ಅದಕ್ಕೆ ಈ ಪಾಯಿಂಟ್ ಸಿಸ್ಟಮ್ಮೇ ಕಾರಣ. ಅಲ್ದೇ ನ್ಯೂಜಿಲೆಂಡ್‌ನೋರು ಬೇರೆ ಅವರಿಗೆ ಪಾಯಿಂಟ್ಸ್‌ನ ದಾನ ಮಾಡಿಬಿಟ್ರಲ್ಲಾ.

ಕೇಶವ: ಆದರೂನೂ ಆ ಹುಡುಗ್ರು ಛಲದಿಂದ ಆಡ್ತಿದಾರೆ ಬಿಡು. ಕ್ರಿಕೆಟ್ ಅವರಿಗೆ ಹೊಸದು. ಆದರು ಎಷ್ಟು ಆಸಕ್ತಿ ನೋಡು ಅವರಿಗೆ. ನಾವೆಲ್ಲಾ ಚಿಕ್ಕೋರಾಗಿದ್ದಾಗ ಟೆಸ್ಟ್ ಮ್ಯಾಚ್ ಶುರು ಆಯ್ತು ಅಂದ್ರೆ ಸಾಕು ರೇಡಿಯೊ ಮುಂದೆ ಕೂತುಬಿಡ್ತಾ ಇದ್ವಿ. ಅಧಿಕಾರಿ, ಫಡ್ಕರ್ ಉಮ್ರಿಗರ್ ಮಂಜ್ರೇಕರ್ ಎಂಥೆಂಥಾ ಖ್ಯಾತ ಆಟಗಾರರು ಆಗಿನ ದಿನಗಳಲ್ಲಿ. ಹಜಾರೆ, ಮರ್ಚೆಂಟ್ ಕ್ರೀಸಿಗೆ ಬಂದ್ರೆ ಸೆಂಚುರಿ ಗ್ಯಾರಂಟಿ.

ಷಫಿ: ಬ್ಯಾಟ್ಸ್‌ಮನ್ ಇರ್ಲಿ, ನಮ್ಮ ಸ್ಪಿನ್ನರ್ಸ್ ಏನು ಕಡಿಮೆ. ಸುಭಾಷ್ ಗುಪ್ತೆ ಬಂದಾ ಅಂದ್ರೆ ನೀಲ್ ಹಾರ್ವೆ ಕೂಡ ಹೆದರಿ ಡಿಫೆನ್ಸಿವ್ ಆಗಿ ಆಡುಕ್ಕೆ ಶುರು ಮಾಡ್ತಿದ್ದ. ಒಟ್ನಲ್ಲಿ ಟಿ.ವಿ. ಇಲ್ದೇ ಇದ್ರೂನೂ ರೇಡಿಯೋ ಕೇಳಿಸ್ಕೊಂಡೇ ಜನ ಎಂಜಾಯ್ ಮಾಡ್ತಾ ಇದ್ರು.

ಶಾಂತ: ಸರಿ, ಮಾತಿನಲ್ಲೇ ಮಂಟಪ ಕಟ್ತಾ ಇದ್ದೀರ. ಸ್ವಲ್ಪ ಫ್ರೂಟ್ ಸಾಲಾಡ್ ತಗೊಳ್ಳಿ. (ಚಮಚಗಳ ಸದ್ದು)

ಕೇಶವ: ಥ್ಯಾಂಕ್ಸ್ ಮೇಡಂ. ಷಫಿ ನೀನು ಹೇಳೋದು ನಿಜ. ಈಗಿನಂತೇ ದಿನಗಳಲ್ಲೂ ಯಾವುದೇ ಕ್ಷೇತ್ರದಲ್ಲಿರಲಿ ಕ್ರಿಕೆಟ್ ಅಂದ್ರೆ ರೇಡಿಯೋ ಮುಂದೆ ಹಾಜರ್. ಅಂದಹಾಗೆ ನಮ್ಮಪ್ಪನಿಗೆ ಖ್ಯಾತ ನಾಟಕಕಾರ ಶ್ರೀರಂಗರ ಪರಿಚಯ ಇತ್ತು. ಅವರಿಗೂ ಸಹ ಕ್ರಿಕೆಟ್ ಕಂಡ್ರೆ ಬಹಳ ಇಷ್ಟ ಇತ್ತಂತೆ.

ರಾಜು: ಕೇಶವ, ನನಗೊಂದು ಐಡಿಯಾ ಬರ್‍ತಾ ಇದೆ.

ಕೇಶವ: ಏನದು ಅಂಥಾ ಬ್ರೈಟ್ ಐಡಿಯಾ?

ರಾಜು: ಶ್ರೀರಂಗರಿಗೆ ಕ್ರಿಕೆಟ್ ಇಷ್ಟ ಅಂದಾಗ ಸಡನ್ನಾಗಿ ಅನ್ನಿಸ್ತು. ಆಗಿನ ಕಾಲದ ಕನ್ನಡದ ಹಿರಿಯ ಕವಿಗಳನ್ನ ಈಗ ಈ ವರ್ಲ್ಡ್ ಕಪ್ಪಿನ ಕಾಮೆಂಟ್ರಿ ಬಾಕ್ಸಿನಲ್ಲಿ ಕೂರಿಸಿ ಎಕ್ಸ್ಪರ್ಟ್ ಅನಾಲಿಸಿಸ್ ಮಾಡಿ ಅಂತ ಹೇಳಿದ್ರೆ ತಮಾಷೆಯಾಗಿರುತ್ತೆ ಅಲ್ವಾ.

ಷಫಿ: ಹೌದೋ ರಾಜು. ನಾವೇ ಯಾಕೆ ಈಗ ಆ ಪ್ರಯೋಗಾನ ಮಾಡಬಾರ್ದು?

ಕೇಶವ: ಪ್ರಯೋಗ? ಅದೆಂಥಾ ಪ್ರಯೋಗ?

ಷಫಿ: ಹೇಳ್ತೀನಿ ಕೇಳು. ಈಗ ಭಾರತ ಶ್ರೀಲಂಕಾ ತಂಡಗಳ ನಡುವೆ ವರ್ಲ್ಡ್ ಕಪ್ ಮ್ಯಾಚ್ ನಡೀತಾ ಇದೆ ಅಂತ ಊಹಿಸ್ಕೋ. ಶ್ರೀನಾಥ್ ಬೋಲ್ ಮಾಡ್ತಾ ಇದಾನೆ. ಸ್ಟುಡಿಯೋದಲ್ಲಿ ಕಾರಂತರು, ಕೈಲಾಸಂ ಹಾಗೂ ಕುವೆಂಪು ಆಸನಾಸೀನರಾಗಿದ್ದಾರೆ. ಅವರುಗಳು ಮಾಡಬಹುದಾದ ಕಾಮೆಂಟ್‌ಗಳನ್ನ ನಾವು ಮೂರು ಜನ ಮಾಡಬೇಕು. ಶಾಂತ ಜಡ್ಜ್. ಯಾರು ಅತ್ಯಂತ ಸಹಜವಾಗಿ ಕಾಮೆಂಟ್ ಮಾಡ್ತಾರೊ ಅವರಿಗೆ ಒಂದು ಎಕ್ಸ್ಟ್ರಾ ಫ್ರೂಟ್ ಸಲಾಡ್ ಐಸ್‌ಕ್ರೀಮ್ ಜೊತೆ. ಕೇಶವ, ನೀನು ಯಾರ ಅನುಕರಣೆ ಮಾಡ್ತೀಯಾ?

ಕೇಶವ: ಕಾರಂತರ ಕಾದಂಬರಿಗಳನ್ನು ತಕ್ಕಮಟ್ಟಿಗೆ ಓದಿದೀನಿ. ಅವರೇ ಇರಲಿ.

ರಾಜು: ಪೂರ್ವಾಶ್ರಮದಲ್ಲಿ ಹಲವು ಕೈಲಾಸಮ್ ನಾಟಕಗಳಲ್ಲಿ ಪಾತ್ರ ವಹಿಸಿದ್ದೆ ನಾನು. ಅವರನ್ನೇ ಅನುಕರಿಸ್ತೇನೆ.

ಷಫಿ: ಸರಿ ನನಗೇನೂ ಛಾಯ್ಸೇ ಇಲ್ಲವಲ್ಲ. ಕುವೆಂಪೂನೆ ಇರ್ಲಿ. ಶಾಂತ, ನೀವು ಜಡ್ಜ್ ಮಾಡುಕ್ಕೆ ರೆಡೀ ತಾನೇ?

ಶಾಂತ: ಓಹೋ ರೆಡೀ.

ಕೇಶವ: ಶ್ರೀನಾಥ ಚೆಂಡು ಎಸೆಯುವ ಹುಡುಗ. ಎಳೆತನದಿಂದಲೇ ಅವನಿಗೆ ಚೆಂಡೆಸೆಯುವ ಉಮೇದು. ಜಾವಗಲ್ಲಿನ ತೋಡಿನ ಬದಿಯಲ್ಲಿ ನಿಂತು ತಡಿಯಲ್ಲಿ ಹರಡಿದ್ದ ಬೆಣಚುಕಲ್ಲುಗಳನ್ನು ಹೆಕ್ಕಿ ಕನ್ನಡಿಯಂತಿದ್ದ ನದಿಯ ನೀರಿನ ಮೇಲೆ ಪುಟಿಯುವಂತೆ ಎಸೆಯುವುದೆಂದರೆ ಅವನಿಗೆ ಮಹದಾನಂದ. ಶ್ರೀನಾಥ ಹಗಲಿನಲ್ಲೂ ಬೇಕಷ್ಟು ಕನಸುಗಳನ್ನು ಕಾಣಬಲ್ಲ. ಅವನದೇ ಕನಸುಗಳನ್ನು ಕಟ್ಟಬಲ್ಲ ಶಕ್ತಿ ಅವನಿಗಿತ್ತೋ

ಇಲ್ಲವ್ಹೋ. ಆದರೂ ಮುಂದೊಮ್ಮೆ ತಾನು ಚೆಂಡನ್ನು ವೇಗದಿಂದ ಎಸೆದು ಹೆಸರು ಗಳಿಸಬೇಕೆಂಬ ಕನಸನ್ನು ಆತ ತಾಸುಗಟ್ಟಲೆ ನೆನೆಯುತ್ತಿದ್ದ. ಆ ಕಾರಣದಿಂದಲೋ ಅಥವಾ ನನಗೆ ತಿಳಿಯದ ಇನ್ನೇನೋ ಕಾರಣದಿಂದಲೋ ಇಂದು ಆ ಆಟದ ಬಯಲಿನಲ್ಲಿ ಆತ ಚೆಂಡನ್ನು ಹಿಡಿದು ಓಡುತ್ತ ಬರುತ್ತಿರುವ ದೃಶ್ಯ ನೋಡಿ ಲಂಕೆಯ ಜಯಸೂರ್ಯನ ಕಾಲುಗಳಲ್ಲಿ ನಡುಕ ಶುರುವಾಗಿದೆ.

ರಾಜು: ಸ್ಪೀಡಿಂಗ್ ಶ್ರೀನಿ ಧೌಡಾಯಿಸ್ಕೊಂಡು ಬಂದಾಂತಂದ್ರೆ, ನಿಮ್ಮ ಪಾಂಟಿಂಗ್ ಆಗ್ಲೀ ಅಟ್ಟಪಟ್ಟು ಆಗ್ಲೀ ಹೆದ್ರಿ ನಡುಗ್ತಾರೆ ಗೊತ್ತೇನ್ರೋ. ಜಯಸೂರ್ಯ ಅಂತೂ "ದೇವ್ರೇ ಈ ಸ್ಪೀಡ್‌ಸ್ಟರ್‌ನ ತಡೆಯೋಕೆ ಸ್ಪೀಡ್ ಬ್ರೇಕರ್ಸ್ ದಯಪಾಲಿಸೂ" ಅಂತ ಪಿಟಿಫುಲ್ ಪ್ರೇಯರ್ಸ್‌ನ ಪಾಸ್ ಆನ್ ಮಾಡ್ತಿರ್ತಾನೆ ಆ ಪ್ರಣವಸ್ವರೂಪೀಗೆ. ಅಬ್ಬ ಅದೇನು ಕರೇಜು ಆ ಜೂನಿಯರ್ ಜನರೇಷನ್ನಿನ ಜಾವಗಲ್ ಜೀನಿಯಸ್ಸಿಗೆ ಅಂತೀನಿ. ಅಲ್ಲಾ ಮೊನ್ನೆ ತಾನೇ ಮೈಸೂರಿನ ಜೀವಣ್‌ರಾಯನ ಕಟ್ಟೆ ಪಕ್ಕದ್ಲಿರೋ ಫಲಹಾರ ದರ್ಶಿನೀಲಿ ಮಸಾಲೆ ಮೆಲ್ತಾ ಇದ್ದ ಮೈನರ್ರು ಈಗ ಇಲ್ಲಿ ಅದೇನೋ ಸಂಸ್ಕೃತದಲ್ಲಿ ಹೇಳ್ತಾರಲ್ಲಾ "ಅರಿಭಯಂಕರ" ಅಂತ ಹಾಗಾಗ್ಬಿಟ್ಟಿದಾನೆ. ಹಿಂದೆ ಹಾಲ್ ಗಿಲ್ ಕ್ರಿಸ್ಟ್ ಅಂದ್ರೆ ನಮ್ಮ ಬಡ್ಡಿಂಗ್ ಬ್ಯಾಟ್ಸ್‌ಮನ್ ಬೆದರ್ತಾ ಇದ್ರು. ಈಗ ನಾವೂ ಕೂಡ ಶ್ರೀನಿ, ಜಾಹಿರ್, ನೆಹ್ರಾ ಅಂತ ಮೆರೆದಾಡಬೋದು.

ಷಫಿ:

ಈ ಮಹಾ ವಿಶ್ವ ಕಪ್ಪಿನ ರಣಯಾಗ ಧೂಮದಲಿ,
ಶ್ವೇತಾಗ್ನಿ ಜ್ವಾಲೆಯೊಂದುರಿಯುತಿರೆ ನಿಶ್ಚಲಂ
ರಂಜಿಸುತ್ತಿದೆ - ಚೆಂಡಿನ ವೇಗದೆಸೆತದ ಕೌಶಲಂ
ಜಯಸೂರ್ಯ, ಅರವಿಂದ ಅಟ್ಟಪಟು ಗಡಣಂ
ತತ್ತರಿಸುತಿದೆ ಶ್ರೀನಾಥನ ಸಾಹಸ ಕ್ರೀಡೆಯಿಂ
ಓ ಶ್ರೀನಾಥ ಜಾಹೀರ, ಅಶೀಶರೇ
ನಿಮ್ಮ ಅತಿಶಯಮಪ್ಪ ಶೌರ್ಯಂ ಗೆಲ್ಗೆ
ವಿಶ್ವ ಕಪ್ ಭಾರತಾಂಬೆಗೆ ಸಲ್ಗೆ

ಶಾಂತ: ಭಲೆ, ನೀವೆಲ್ರೂ ಗೆದ್ದಿದೀರ. ಹಾಗಾಗಿ ಇದೊಂದು Three way tie. ಎಲ್ರಿಗೂ ಫ್ರೂಟ್ ಸಲಾಡ್ ತರ್ತೀನಿ ಕೊಡ್ಕೊಳ್ಳಿ.

(ಆಕಾಶವಾಣಿ ಕೃಪೆ)

ಬ್ರಹ್ಮನಿಗೊಂದು ಬಹಿರಂಗ ಪತ್ರ

ಡಿಯರ್ ಬ್ರಹ್ಮ,

ನಿನ್ನ ಸೃಷ್ಟಿಯಲ್ಲಿ ಅದೆಷ್ಟು ವೈವಿಧ್ಯತೆಯನ್ನು ತೋರಿಸಿದ್ದೀಯಾ. ಎಲ್ಲೊ ಕೆಲವು ಹೋಲಿಕೆಗಳನ್ನು ಕೊಟ್ಟು ಗೊಂದಲವನ್ನು ಮಾಡಿದ್ದಿಯ. ಮಾನವರು ಈಗ ಕ್ಲೊನಿಂಗ್‌ನಲ್ಲಿ ನಿರತರಾಗಿದ್ದಾರೆ. ದುಷ್ಟ ವ್ಯಕ್ತಿಗಳು ತಮ್ಮ ಆತ್ಮರಕ್ಷಣೆಗಾಗಿ ತಮ್ಮ ತದ್ರೂಪಿಗಳನ್ನು ಹುಡುಕಿಸಿ ದುಬಾರಿ ಸಂಭಾವನೆ ಕೊಟ್ಟು ಸಾಕುತ್ತಿದ್ದಾರೆ. ಉದಾಹರಣೆಗೆ ಸದ್ದಾಂ ಹುಸೇನ್ ಬಿನ್ ಲಾಡೆನ್, ವೀರಪ್ಪನ್ ಇತ್ಯಾದಿ. ಈಗ ನಿನ್ನಲ್ಲಿ ನನ್ನದೊಂದು ಪುಟ್ಟ ಕೋರಿಕೆ ಅಥವಾ ಮನವಿ. ಒಬ್ಬರಂತೆ ಏಳು ಜನ ಇರುತ್ತಾರೆ ಎಂಬುದು ಬಹಳ ಹಳೇ ಕಾಲದ ನಂಬಿಕೆ ಅದರ ಬದಲಾಗಿ 11 ರಿಂದ 15 ಜನ ಇರುವ ಹಾಗೆ ನೀನು ಏಕೆ ಸೃಷ್ಟಿಸಬಾರದು. ನೋಡುವುದಕ್ಕೆ ಮಾತ್ರವಲ್ಲ, ಕೈ ಕಾಲು ಅಳತೆಗಳಲ್ಲಿ, ಎತ್ತರದಲ್ಲಿ, ಗಾತ್ರದಲ್ಲಿ ತೂಕದಲ್ಲಿ ನೂರಕ್ಕೆ ನೂರರಷ್ಟು ಯೂನಿಫಾರಂ ಆಗಿ. ನಾನು ಈ ರೀತಿ ಕೇಳುವುದರಲ್ಲಿ ಅರ್ಥವಿದೆ. ಕ್ರಿಕೆಟ್ ಎಂಬ ಕ್ರೀಡೆ ಭೂಲೋಕದಲ್ಲಿ ಅತ್ಯಂತ ಆಕರ್ಷಕ ಕ್ರೀಡೆಯಾಗಿರುವ ವಿಷಯ ನಿನಗೆ ತಿಳಿದಿರಬೇಕಷ್ಟೆ. ಅದರ ಅಭಿಮಾನಿಗಳು ಅಪಾರ. ಎಲ್ಲಾ ದೇಶದವರು ಈ ಆಟಕ್ಕೆ ಬರುತ್ತಿದ್ದಾರೆ. ವಿಶ್ವಕಪ್ ವಿಚಾರ ತಿಳಿಯದವರಿಲ್ಲ. ಒಂದು ದಿನದ ಆಟದ ಬಗ್ಗೆ ನಾರದರಿಂದ ತಿಳಿದಿರಬೇಕು. ಈಗ ಯಾರಿಗೂ ದೀರ್ಘಾವಧಿ ಆಟ ಬೇಕಿಲ್ಲ.


ಜೀವನದಲ್ಲೂ ಹಿಟ್ ಔಟ್ ಆರ್ ಗೆಟ್ ಔಟ್ ನಿಯಮವಿದ್ದರೆ ಚೆನ್ನ. ರನ್ನು ಹೊಡೆಯೊಲ್ಲ ಔಟ್ ಆಗೋದು ಇಲ್ಲ ಅಂದ್ರೆ, ಹೇಗೆ. ಫಲಿತಾಂಶ ಬೇಗ ಬರಬೇಕು. ಬರಲೇಬೇಕು. ಹೀಗಾಗಿ ಎಲ್ಲಾ ಆಟವೂ ಕುತೂಹಲಕರ. ಆದರೆ ಕೆಲವು ಹೊಸ ಹೊಸ ತೊಂದರೆಗಳು ಬರುತ್ತಿವೆ. ಚೆನ್ನಾಗಿ ಆಡಲೆಂದೂ ಅಥವಾ ಕೈ, ಮೈ ಸೊಂಟ ನೋವೆಂದು ಔಷಧಿ ಸೇವಿಸಿದರೆ ಅದು ಉದ್ದೀಪನ ಮದ್ದೆಂದು ಹಿಡಿದು ಶಿಕ್ಷಿಸುತ್ತಾರೆ. ಬ್ಯಾಟಿನ ಅಗಲ, ವಿಕೆಟಿನ ಹೈಟು ದಪ್ಪ, ಗ್ಲೌಸಿನ ಮೆಟಿರಿಯಲ್, ಬಾಲಿನ ಸುತ್ತಳತೆ, ತೂಕ ಹೀಗೆ ಎಲ್ಲವನ್ನು ನಿರ್ದಿಷ್ಟ ಮಿತಿಗೆ ಸರಿಯಾಗಿದೆಯೆ ಇಲ್ಲವೇ ಎಂದು ಪರೀಕ್ಷಿಸುತ್ತಿದ್ದಾರೆ. ಪ್ರತಿಯೊಂದು ಅಳತೆಗೆ ತಕ್ಕ ಹಾಗೆ ಇರಬೇಕು. ಆದರೆ ಮುಖ್ಯವಾಗಿ ಆಡುವವರು ಒಂದೇ ರೀತಿ ಇರಬೇಕೆಂದು ನಿಯಮ ಮಾಡದಿರುವುದು ಅನ್ಯಾಯ. ಒಬ್ಬ ಕುಳ್ಳ, ಇನ್ನೊಬ್ಬ ಆಕಾಶಮಾನವ (ಎತ್ತರದ) ಒಬ್ಬ ಬಡಕಲ ಇನ್ನೊಬ್ಬ ಧಾಂಡಿಗ, ಒಬ್ಬ ಕರಿಯ ಇನ್ನೊಬ್ಬ ಕೆಂಚ. ಇಷ್ಟೊಂದು ತಾರತಮ್ಯವಿದ್ದಾಗ ಸಾಮಾಜಿಕ ನ್ಯಾಯ ಹೇಗೆ ಸಾಧ್ಯ. ಉದ್ದ

ಕಾಲಿನವನು ಓಡುವ ರಭಸ ಗಿಡ್ಡ ಕಾಲಿನವನಿಗೆ ಸಾಧ್ಯವೆ? ಹಾಗೆ ಉದ್ದ ಕೈ ಇರುವವನು ದೂರ ಹೋಗುವ ಬಾಲನ್ನು ಕ್ಯಾಚ್ ಹಿಡಿಯುವುದು ಸುಲಭ. ಎತ್ತರದವನಿಗೆ ಬೌನ್ಸರ್ ಭಯವಿಲ್ಲ. ಇಷ್ಟೆಲ್ಲಾ ವ್ಯತ್ಯಾಸವಿದ್ದರೆ ಹೇಗೆ? ಐ.ಸಿ.ಸಿ. ಯವರು ಇದರ ಬಗ್ಗೆ ಈಗಾಗಲೇ ಯೋಚಿಸುತ್ತಿರಬೇಕು. ನಿನ್ನ ಸೃಷ್ಟಿಯಲ್ಲಿ ಸ್ವಲ್ಪ ಮೊದಲೇ ತಯಾರು ನಡೆಸಬೇಕು.

ನಿನಗೆ ಈಗ Order ಕೊಟ್ಟರೆ 18 ವರ್ಷಗಳ ನಂತರ (ಕನಿಷ್ಟಪಕ್ಷ) ವಿಶ್ವಕಪ್‌ನಲ್ಲಿ ಎಲ್ಲಾ ಒಂದೇ ರೀತಿಯ (ಸಾಮರ್ಥ್ಯದ) ಆಟಗಾರರು ಸಿಕ್ಕಬಹುದು. ಏಕೆಂದರೆ ನಿನಗೆ ಶಾರ್ಟ್ ಡೆಲವರಿ ಗೊತ್ತೇ ಇಲ್ಲ! ನಿಮ್ಮಿಂದ ಉತ್ತರ ಬಂದಮೇಲೆ ನಾನು ಐ.ಸಿ.ಸಿ.ಯವರಿಗೆ ಅಧಿಕೃತವಾಗಿ ನನ್ನ ಅಮೂಲ್ಯ ಸಲಹೆಗಳನ್ನು ಬರೆಯುತ್ತೇನೆ.

ಇಂತಿ ನಿಮ್ಮ ಹಾಗೂ ಕ್ರಿಕೆಟ್ ವಿಶ್ವಾಸಿ,

– ಕೃಷ್ಣ ಸುಬ್ಬರಾವ್



ಪಂಕ್ಚುಯೇಶನ್

– ಪ್ರಕಾಶ್

ಶುದ್ಧವಾದ ಕನ್ನಡದಲ್ಲಿ ಅವಶ್ಯಕ ಚಿಹ್ನೆಗಳು ಎಂದರೆ ಯಾರಿಗೂ ಅರ್ಥವಾಗೋದಿಲ್ಲ, ಅದಕ್ಕೇ ಈ ಶೀರ್ಷಿಕೆ. ಬಹಳ ಸಣ್ಣ ವಯಸ್ಸಿನಿಂದ, ನಮಗೆಲ್ಲ ಅ.ಚಿ. ಎಂದರೆ ಬಹಳ ಭಯ, ಭಕ್ತಿ, ಕಾಮ, ಕೋಲನ್, ಸೆಮಿಕೋಲನ್, ಫುಲ್‌ಸ್ಟಾಪ್, ಇನ್‌ವರ್ಟೆಡ್ ಕಾಮ ಇತ್ಯಾದಿಗಳನ್ನು ಹೇಗೆ ಉಪಯೋಗಿಸಬೇಕು ಅಂತ ನಮ್ಮ ಸ್ಕೂಲ್ ಮೇಷ್ಟ್ರುಗಳು ನಮಗೆ ಶಿಕ್ಷೆ ವಿಧಿಸುತ್ತಿದ್ದರು. ಈಗ ವ್ಯಾಕರಣದ ಭಯ ಇಲ್ಲದೆ, ಈ ಅ.ಚಿ.ಗಳ ಬಗ್ಗೆ ಯೋಚನೆ ಹರಿಸೋಣ.

ಅತ್ಯಂತ ಉಪಯುಕ್ತ ಹಾಗೂ ಸಾಧಾರಣ ಅ.ಚಿ. ಎಂದರೆ ಕಾಮ, ಬುದ್ಧಿ ಉಪಯೋಗಿಸಿ ಸೂಕ್ತವಾದ ಕಡೆ ಕಾಮ ಬಳಸಿದರೆ ಓದುಗರಿಗೆ ಸುಲಭ. ಕೆಲವು ದುರಹಂಕಾರಿ ಲೇಖಕರು ಉದ್ದವಾದ ಹನುಮಂತನ ಬಾಲದಂತೆ ವಾಕ್ಯಗಳನ್ನು ಬರೆದು ಶಾಯಿ ದುರುಪಯೋಗ ಮಾಡಿ ಓದುಗರ ತಲೆ ಕೆಡಿಸುತ್ತಾರೆ. ವಾಕ್ಯ ಬರೆದ ಮೇಲೆ, ಎಲ್ಲೆಲ್ಲೋ, ತಮಗೆ ಬೇಕಾದ ಹಾಗೆ, ಕಾಮಗಳನ್ನ ಉದುರಿಸುತ್ತಾರೆ. ಈ ಕಾಮಗಳೋ, ಪಾಪ ಅನಾಥ ಶಿಶುಗಳಂತೆ ಅಲ್ಲಲ್ಲಿ ಸುಳಿದಾಡುತ್ತಿರುತ್ತವೆ. ಕೆಲವು ಸಲವಂತೂ, ದೀರ್ಘ ವಾಕ್ಯವೇ ಒಂದು ಕಾಮಗಳ ಸರಮಾಲೆಯಿಂದ ತಲೆ ಬಗ್ಗಿಸಿ ತಮ್ಮ ಅರ್ಥವನ್ನೇ ಕಳೆದುಕೊಂಡುಬಿಡುತ್ತವೆ. ಇದರ ಬದಲು, ಕಾಮಗಳನ್ನು ಅಕ್ಕರೆಯಿಂದ, ಅರ್ಥಪೂರ್ಣವಾಗಿ ಬಳಸಿದರೆ, ಓದುವುದು ಒಂದು ಸಂತೋಷಕರವಾದ ಹವ್ಯಾಸವಾಗುತ್ತದೆ.

ಸೆಮಿಕೋಲನ್‌ಗಳದ್ದೇ ಬೇರೆ ಸೊಗಸು. ಈ ವಾಕ್ಯದಲ್ಲಿ ಇನ್ನೂ ಮುಂದೆ ಅರ್ಥ ಮಾಡಿಕೊಳ್ಳಬೇಕಾದ ಸಂಗತಿ ಇದೆ; ಅದೂ ಮಹತ್ವದ ವಿಷಯ; ಪೂರ್ತಿ ಓದಿದರೆ ಒಳಿತು ಎಂದು ಸೆಮಿಕೋಲನ್ ಹೇಳುತ್ತದೆ. ಫುಲ್‌ಸ್ಟಾಪ್‌ಗಿಂತ ಸೆಮಿಕೋಲನ್ ಕರುಣಾಮಯಿ. ಲೇಖಕ ಬರೆದಿರುವುದನ್ನು ಅರ್ಥಮಾಡಿಕೊಳ್ಳಲು ಸೆಮಿಕೋಲನ್ ಉತ್ತೇಜನ ಕೊಡುತ್ತದೆ; ಓದುಗನಿಗೂ ಸಂತಸವಾಗುತ್ತದೆ. ಫುಲ್ ಸ್ಟಾಪ್ ನಿಷ್ಕರುಣಿ. ಈ ವಾಕ್ಯ ಇಷ್ಟೇ. ಬೇಕಾದರೆ ಓದು. ಇಲ್ಲದಿದ್ದರೆ ಬಿಡು ಅನ್ನುತ್ತೆ ಫುಲ್‌ಸ್ಟಾಪ್. ಹೌದು, ನನ್ನ ಫೇವರೆಟ್ ಅ.ಚಿ. ಎಂದರೆ ಸೆಮಿಕೋಲನ್; ಓದುಗನಿಗೆ ಈ ವಾಕ್ಯದಲ್ಲಿ ಇನ್ನೂ ಆಕರ್ಷಕ ವಿಷಯವಿದೆ; ತಾಳ್ಮೆಯಿಂದ ಓದು; ಎಲ್ಲ ಅರ್ಥವಾಗುತ್ತದೆ ಅನ್ನುತ್ತೆ ಸೆಮಿಕೋಲನ್. ಅಂದ ಹಾಗೆ, ಸೆಮಿಕೋಲನ್ ಅಂದರೆ ಅರ್ಧ ವಿರಾಮ ಚಿಹ್ನೆ.

ಕೋಲನ್ ಕಂಡರೆ ನನಗೆ ಅಷ್ಟಕ್ಕಟ್ಟೆ. ಕೋಲನ್ (ಅಪೂರ್ಣ ವಿರಾಮ ಚಿಹ್ನೆ). ಬಡಪಾಯಿ ಓದುಗರನ್ನ ಕೋಲನ್ ಹೀಗೆ ಹಾಗೆ ಎಳೆದಾಡಿ ಸತಾಯಿಸಿಬಿಡುತ್ತದೆ. ಕೋಲನ್ ಕಂಡಾಗಲೆಲ್ಲ ನನಗೆ ಇನ್ನೊಂದು ಭಯ. ಲೇಖಕನಿಗೆ ನಮ್ಮ ಮೇಲೆ ವಿಶ್ವಾಸವಿಲ್ಲ, ಮರ್ಯಾದೆ ಇಲ್ಲ. ಉದಾಹರಣೆಗೆ ಈ ವಾಕ್ಯ ನೋಡಿ.

''ಸಾರ್ಥಕ ಜೀವನ ನಡೆಸಲು ಮಾನವನಿಗೆ ಹಲವಾರು ವಿಷಯಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ: ಮೊದಲನೆಯದಾಗಿ, ಬಾಳಿನಲ್ಲಿ ಗುರಿಯೊಂದಿರಬೇಕು. ಎರಡನೆಯದಾಗಿ, ಆ ಗುರಿಯನ್ನು ತಲಪಬೇಕಾದ ಮಾರ್ಗದ ಅರಿವಿರಬೇಕು. ಮೂರನೆಯದಾಗಿ, ತನ್ನಲ್ಲಿ ಆತ್ಮವಿಶ್ವಾಸವಿರಬೇಕು....'' ಈ ನಿರರ್ಗಳ ಧಾರೆಯನ್ನ ಒಂದು ಕಡೆ ಬಿಟ್ಟು ಕಾಫಿ ಕುಡಿಯಲು ಹೋಗುವಹಾಗಿಲ್ಲ! ನಿಮ್ಮನ್ನ ಹದಿನೆಂಟನೆಯದಾಗಿ ಅನ್ನುವ ತನಕ ಕೋಲನ್ ತನ್ನ ಕಪಿ ಮುಷ್ಟಿಯಲ್ಲಿ ಹಿಡಿದುಬಿಡುತ್ತದೆ. ಆ ಲೇಖನ ಓದುವ ಹೊತ್ತಿಗೆ, ನಿಮಗೆ ನಿಮ್ಮ ಜೀವನದ ಗುರಿ ಕೋಲನ್ ಕಂಡುಹಿಡಿದ ವ್ಯಾಕರಣಿಯನ್ನು ಕೊಲ್ಲುವುದೇ ಆಗಿಬಿಡುತ್ತದೆ: ಆದರೆ, ಮೊದಲನೆಯದಾಗಿ, ಆತ ಕಾಲವಾಗಿದ್ದಾನೆ...!

ನನ್ನ ಇನ್ನೊಂದು ಪ್ರಿಯ ಅ.ಚಿ. ಎಂದರೆ ಅಪಸಾರಣ ಚಿಹ್ನೆ, ಅರ್ಥಾತ್ Dash. ಇದಕ್ಕೆ ಅಷ್ಟು ಮಡಿವಂತಿಕೆ ಇಲ್ಲ. ಯಾವುದಾದರೂ ವಿಷಯದ ಬಗ್ಗೆ ಪ್ರತಿಪಾದನೆ ಮಾಡುವಾಗ, ಇನ್ನೊಂದು ಆಲೋಚನಾ ಲಹರಿ (ಅಸಂಬದ್ಧವಾದದ್ದಲ್ಲ!) ಹರಿಸಬೇಕಾದರೆ Dash ಬೇಕಾಗುತ್ತೆ. ಉದಾಹರಣೆ ಕೊಟ್ಟೇ ಬಿಡುತ್ತೇನೆ.

''ಉತ್ತಮ ಹಾಸ್ಯ ಅಂದರೇನು? ನಾನು ಬರೆದದ್ದೆಲ್ಲ ಹಾಸ್ಯ ಎಂದು ತಿಳಿಯುವ ಲೇಖಕರು ಇರುತ್ತಾರೆ. ಅವರಿಂದಲೇ ರಾಷ್ಟ್ರದ ಪೇಪರ್ ಉದ್ಯಮ ಲಾಭಕಾರಿಯಾಗಿ ಬೆಳಗುತ್ತಿರುವುದು ಉತ್ತಮ ಹಾಸ್ಯವೆಂದರೆ ಓದುಗರ ಮನರಂಜನೆ ಆಗಬೇಕು - ಹಾಸ್ಯದಿಂದ ಮನನೊಂದರೆ ಅದು ಅಧಮ ಹಾಸ್ಯ - ಅವನ ಮನಸ್ಸು ವಿಕಸಿತವಾಗಬೇಕು.'' ಲೇಖಕರು ಹಲವಾರು ಬಾರಿ ಮೊದಲನೆಯ - ಹಾಕಿಬಿಡುತ್ತಾರೆ. ಆಮೇಲೆ ಕಾರಣಾನಂತರದಿಂದ ಎರಡನೆಯ - ಮರೆತು ಬಿಡುತ್ತಾರೆ. ನನ್ನಂಥ ಕಕವ ಓದುಗರು ಪಾಪ ಲೇಖನದ ಉಳಿದ ಭಾಗವನ್ನೆಲ್ಲ - ಅದು ಅಧಮ ಹಾಸ್ಯವಾದರೂ - ಕೂಲಂಕಷವಾಗಿ ಎರಡನೆಯ -ಗೆ ಹುಡುಕುತ್ತಿರುತ್ತೇವೆ. ಈ ಬಗ್ಗೆ ಕನ್ನಡ ವ್ಯಾಕರಣದಲ್ಲಿ ಆಗಬೇಕಾದ ಪ್ರಗತಿ ಸ್ವಲ್ಪ ಆಗಿದ್ದರೂ - ಇನ್ನೂ ಬೇಕಾದ ಹಾಗೆ ಇದೆ.


ಕಡೆಯದಾಗಿ, ಆವರಣ ಚಿಹ್ನೆ ಅರ್ಥಾತ್ ಬ್ರ್ಯಾಕೆಟ್ ಅಥವಾ posh ಆಗಿ ಹೇಳಬೇಕಾದರೆ parenthesis. ಇದನ್ನು ರಾಜಕಾರಣಿಗಳು ಹಾಗೂ ಆಗಾಗ ಭಾಷಣಗಳನ್ನು ಬಿಗಿಯಬೇಕಾದವರು ಬಹು ಬಾರಿ ಉಪಯೋಗಿಸುತ್ತಾರೆ. ಉದಾಹರಣೆಗೆ ಮಂತ್ರಿವರ್ಯರ ಎಲೆಕ್ಷನ್ ಮುನ್ನ ಭಾಷಣ.

''ನನ್ನ ಹಾಗೂ ನನ್ನ ಸಂಗಡಿಗರಿಂದ ಈ ದೇಶಕ್ಕೆ ಆಗಿರುವ ಅಗಾಧ ಸೇವೆಗೆ ನೀವೇ ಕಾರಣರು. (ತಲೆ ಎತ್ತಬಾರದು; ಗಂಭೀರ ಮುಖಭಾವ) ನಾನು ಆರೋಗ್ಯ ಚೆನ್ನಾಗಿರುವವರೆಗೂ ದೇಶ ಸೇವೆ ಮಾಡಲು ಉತ್ಕಟ ಇಚ್ಛೆ ಉಳ್ಳವನು (ನಸುನಗೆ, ಚಪ್ಪಾಳೆಗಳ ಸುರಿಮಳೆ ಕಾಯಬೇಕು).''

ಒಂದು ಸಲ ಚಮತ್ಕಾರ ಆಯಿತು. ಅದಕ್ಕೆ ಕಾರಣ ಆವರಣ ಚಿಹ್ನೆ! ನಿಜ ಹೇಳಬೇಕಾದರೆ, ಆ ಚಿಹ್ನೆಯ ಅಭಾರ. ಮಂತ್ರಿವರ್ಯರ ಕೊನೆಯ ಸೆಂಟೆನ್ಸ್ ಹಾಗೂ ಕ್ಲೈಮಾಕ್ಸ್‌ಗೆ, ಎಲ್ಲ ಕಾದಿದ್ದಾರೆ!

''ನನಗೆ ಓಟುಹಾಕಿ, ಪರೋಕ್ಷವಾಗಿ ನೀವೂ ಭಾರತ ಮಾತೆಯ ಸೇವೆ ಮಾಡಿ! ತಲೆ ತಗ್ಗಿಸಿ ದೀನ ಮುಖದೊಂದಿಗೆ ಸ್ಟೇಜ್ ಬಿಡಬೇಕು!'' ಎಂದು ಭಾರೀ ದನಿಯಲ್ಲಿ ಕೂಗಿದರು!

★★★



ಮನೆ ಪಾಠನೋ... ಪಾಠದ ಮನೇನೋ

- ಬೇಲೂರು ರಾಮಮೂರ್ತಿ

ಮಕ್ಕಳಿಗೆ ಮನೆಪಾಠ ಒಳ್ಳೇದೋ, ಪಾಠದ ಮನೆ ಒಳ್ಳೇದೋ ಅನ್ನೋ ಜಿಜ್ಞಾಸೆ ತಮ್ಮಾಜಿಯನ್ನು ಕಾಡ್ತಲೇ ಇತ್ತು. ಮನೆ ಪಾಠಕ್ಕಿಂತ ಪಾಠದ ಮನೇನೇ ಒಳ್ಳೇದು ಅಂತ ತಾನೇ ತೀರ್ಮಾನ ಮಾಡೇ ಬಿಟ್ಟಿದ್ದ. ಆಫೀಸಿನಲ್ಲಿ ಅವನ ಆಪ್ತ ಸ್ನೇಹಿತ ಸಿದ್ದೇಶು ''ಲೇ ಬೇಕೂಫ ಎರಡೂ ಒಂದೇ ಅಲ್ವೇನೋ'' ಅಂದಿದ್ದ. ಅದಿಕ್ಕೆ ತಮ್ಮಾಜಿ ''ಇಲ್ವೋ... ಎರಡೂ ಮನೇಲಿ ಹೇಳಿಕೊಡೋದಾದರೂ ಎರಡಕ್ಕೂ ಬಹಳ ವ್ಯತ್ಯಾಸವಿದೆ. ಈಗ ನೋಡು ಮನೆ ಪಾಠ ಅಂದ್ರೆ ಮನೇಲಿ ನಾನಾಗಲೀ ನನ್ನ ಹೆಂಡ್ತಿಯಾಗಲೀ ಹೇಳಿಕೊಡೋದು. ಅದಕ್ಕೆ ಕಾಸಿಲ್ಲ, ಕರಿಮಣಿಯಿಲ್ಲ. ಇನ್ನೊಂದು ಪಾಠದ ಮನೆ ಅಂದ್ರೆ ಮೇಡಂ ಮನೆಗೆ ಪಾಠಕ್ಕೆ ಕಳಿಸೋದು. ಅಂದ್ರೆ ಅದಿಕ್ಕೆ ಕಾಸಿದೆ'' ಅಂತ ವಿವರಿಸಿದ್ದ. ತಮ್ಮಾಜಿಗಿರುವ ಇಬ್ಬರು ಮಕ್ಕಳು ರವಿ ಮತ್ತು ಗಣೇಶ... ಒಂದೇ ವರ್ಷದ ವ್ಯತ್ಯಾಸ. ಹೀಗಾಗಿ ಒಬ್ಬ ಆರು ಇನ್ನೊಬ್ಬ ಏಳು... ರವಿ ಬಹಳ ಬುದ್ಧಿವಂತ. ಒಂದಿನ ಅವನು ತಾಯಿಯ ಹತ್ತಿರ ಬಂದು ''ಅಮ್ಮಾ ಹೀಗೆಲ್ಲ ತಪ್ಪು ತಪ್ಪು ಹಾಡು ಬರೀಬಹುದೇನಮ್ಮ... ಬರೆದಿದ್ನೆ ಅವರು ಹಾಗೇ ಹಾಡಬಹುದೇನಮ್ಮ'' ಅಂತ ಕೇಳಿದ. ಮಗ ಬಹಳ ಅನಾಲಿಟಿಕಲ್ ಬ್ರೈನ್ ಬೆಳೆಸಿಕೊಳ್ತಿದಾನೆ ಅಂತ ಅವರಮ್ಮನಿಗೆ ಖುಷಿ. ಅವಳು ಕಾಯಿ ತುರೀತಾ ಇದ್ದೋಳು ಒಂದಿಷ್ಟು ತುರೀನ ಮಗನ ಬಾಯಿಗೆ ತುರುಕಿ ''ಅದ್ಯಾವ ಹಾಡೋ'' ಅಂತ ಕೇಳಿದಳು. ರವಿ ಕಾಯನ್ನು ಅಗಿದಗಿದು ರಸ ನುಂಗಿ ಮತ್ತೆ ಮತ್ತೆ ಒಂದ್ಸಾರಿ ಆರು ಒಂದ್ಸಾರಿ ಮೂರು ಅನ್ನಬಹುದಾ... ನೋಡು... ನಿಂಗೂ ಆ ಹಾಡು ಗೊತ್ತು...''ಆರು ಹಿತವರು ನಿನಗೆ ಈ ಮೂವರೊಳಗೆ ಅಂತ... ಆರು ಹಿತವರು ಅಂತನೂ ಹೇಳ್ತಾರೆ... ಮತ್ತೆ ಈ ಮೂವರೊಳಗೆ ಅಂತಾರೆ.... ಹಾಗಾದ್ರೆ ಇನ್ನು ಮೂರು ಜನ ಎಲ್ಲಿ ಹೋದ್ರು'' ಅಂದ. ಅಮ್ಮ ಅವನ ತಲೆ ಮೇಲೆ ಮೆತ್ತಗೆ ತಟ್ಟಿ ಅಲ್ಲಿ ಆರು ಹಿತವರು ಅಂದ್ರೆ ಯಾರು ಅಂತ... ಆರು ಅಂದ್ರೆ ಒಂದು ಎರಡು, ಮೂರು, ನಾಲ್ಕು, ಐದು, ಆರು ಅಲ್ಲ'' ಅಂದಳು. ಹಾಗಿದ್ರೆ ಯಾರು ಹಿತವರು ಅಂತನೇ ಬರೀಬಹುದಿತ್ತಲ್ಲ ಅಂತ ರವಿ ಕೇಳಿದ್ದಕ್ಕೆ ಅವರಮ್ಮನಲ್ಲಿ ಉತ್ತರವಿಲ್ಲ. ಹೋಗು ಆಡ್ಕೋ ಅಂದು ರೇಗಿ ಕಳಿಸಿದಳು. ತಮ್ಮಾಜಿ ಅದೇ ಟೈಮಿಗೆ ಮನೆಗೆ ಬಂದು ಹೆಂಡ್ತಿ ಕಾಯಿ ತುರೀತಾ ಇರೋದನ್ನ ಕಂಡು ''ಲೇ... ಶಾಂತು... ಕಾಯಿ ಹಾಲಿನ ಕಾಫಿ ಮಾಡಿ ತುಂಬಾ ದಿವಸ ಆಯ್ತಲ್ವೇನೇ ಈಗ ಮಾಡಿ ಕೊಡೆ ಅಂದು ಗೋಗರೆದ.

ಚಪ್ಪರಿಸಿಕೊಂಡು ಕಾಫಿ ಕುಡೀತಾ ಇದ್ದ ಗಂಡನನ್ನು ನೋಡಿ ಶಾಂತು "ಸಾಕು... ಶಬ್ದ ಮಾಡಿದ್ದು... ಆಮೇಲೆ ಹಸುಗಳೂ ನಾಚ್ಕೊಂಡಾವು ಅವುಗಳು ಕಲಗಚ್ಚು ಕುಡಿಯುವಾಗ ಕೂಡಾ ಹೀಗೆ ಶಬ್ದ ಮಾಡಲ್ಲ ಅಂದಳು. ಅದೇನೋ ತಮ್ಮಾಜಿಗೆ ಚಪ್ಪರಿಸಿಕೊಂಡು ತಿಂದು ಕುಡಿದು ಮಾಡಿದರೆ ಮಾತ್ರ ತಿಂದ ಸುಖ. ಅವನು ಆಫೀಸಲ್ಲಿ ಊಟ ಮಾಡ್ತಿದಾನೆ ಅಂತ ಯಾವುದಾದರೂ ಕ್ಯುಬಿಕಲ್‌ನಲ್ಲಿ ಕೂತ್ಕೊಂಡು ಕೂಡಾ ಹೇಳಿಬಿಡಬಹುದಿತ್ತು. ಊಟದಲ್ಲಿ ಅವನು ಪಂಟರು. ಹಾಗೆ ತಮ್ಮಾಜಿ ಕಾಯಿಹಾಲಿನ ಕಾಫಿ ಕುಡಿದು "ನಾನು ಸ್ವಲ್ಪ ಮೇಡಂ ಮನೆಗೆ ಹೋಗಿ ಬರ್ತೀನಿ" ಅಂದ. ಇದ್ಯಾಕೆ ಅಂತ ಶಾಂತು ಕೇಳಿದಾಗ ಅದೇನೋ ಹೇಳಿಕಳಿಸಿದಾರೆ ನನ್ನನ್ನ ನೋಡಬೇಕು ಅನಿಸಿದೆಯೋ ಏನೋ ಅಂದು ಒಳಗೊಳಗೇ ನಕ್ಕ.

ಶರ್ಮಿಳಾ ಮೇಡಂ ಮನೆಗೆ ರವಿ ಮತ್ತು ಗಣೇಶ ಇಬ್ಬರೂ ಪಾಠಕ್ಕೆ ಹೋಗ್ತಿದ್ರು, ಅವರು ಚೆನ್ನಾಗಿ ಪಾಠ ಹೇಳಿ ಕೊಡ್ತಿದ್ರು. ಆಗಾಗ ಮನೆಗೆ ಹೋಂವರ್ಕ್ ಕೂಡಾ ಕೊಡ್ತಿದ್ರು. ಶಾಲೇಲಿ ಕೊಡೋ ಹೋಂವರ್ಕ್‌ನ ಶರ್ಮಿಳಾ ಮೇಡಂ ಮಾಡಿಸ್ತಿದ್ರು. ಶರ್ಮಿಳಾ ಮೇಡಂ ಕೊಡೋ ಹೋಂವರ್ಕ್‌ನ ತಮ್ಮಾಜಿ ಮಾಡಿಕೊಡಬೇಕಿತ್ತು. ತಮ್ಮಾಜಿ ಊಟ ಮಾಡೋದು ತಪ್ಪಿದರೂ ಹೋಂವರ್ಕ್ ಮಾಡಿಕೊಡೋದು ತಪ್ತಿರಲ್ಲಿಲ್ಲ. ಏನೋ ಚರ್ಚೆ ಮಾಡೋದಿದೆ ಅಂದ್ಕೊಂಡು ಮೇಡಂ ಮನೆಗೆ ಹೊರಟ. ಏನೂ ಚರ್ಚೆ ಮಾಡೋದು ಇಲ್ಲದಿದ್ದರೂ ಅವರನ್ನು ನೋಡೋದೇ ಒಂದು ಭಾಗ್ಯ ಅದ್ಕೊಂಡು ಹೊರಟ.

ಶರ್ಮಿಳಾ ಮೇಡಂ ಚೆನ್ನಾಗಿ ಅಲಂಕರಿಸಿಕೊಂಡಿದ್ರು. ಅವರು ಹಾಗೇ ಡ್ರೆಸ್ ಸೆನ್ಸು ಚೆನ್ನಾಗಿದೆ. ಎಲ್ಲ ಮ್ಯಾಚಿಂಗು ಅವರಿಗೆ ಅವರ ಗಂಡ ಒಂದೇ ಮಿಸ್ ಮ್ಯಾಚಿಂಗು ಅಂತ ಕೆಲವರು ಮಾತಾಡ್ಕೊತಾರೆ.

ತಮ್ಮಾಜಿ ಮನೆಗೆ ಬಂದಾಗ ಶರ್ಮಿಳಾ ಮೇಡಂ ಅವರಿಗಾಗಿ ಕಾಯ್ತಿದ್ರು. "ನಮಸ್ಕಾರ ಮೇಡಂ - ಹೇಳಿ ಕಳಿಸಿದ್ರಂತೆ" ಅಂದರು.

"ಹೌದು ಹೇಳಿಕಳಿಸಿದೆ ಬನ್ನಿ..."

"ಯಾಕ್ ಮೇಡಂ... ನಮ್ ಹುಡುಗ್ರು ಏನಾದರೂ ತಂಟೆ ಮಾಡಿದ್ರಾ..."

"ಇಲ್ಲ"

"ಹೋಂವರ್ಕ್ ಸರಿಯಾಗಿ ಮಾಡ್ಕೊಂಬರ್ತಿದಾರಾ"

''ಅದೇ ತಾಪತ್ರಯ. ಅದಿಕ್ಕೆ ನಿಮಗೆ ಹೇಳಿ ಕಳಿಸಿದೆ''

''ಹೋಂವರ್ಕ್ ಸರಿಯಾಗಿ ಮಾಡಿದರೂ ತಾಪತ್ರಯಾನಾ...''

''ಇರ್‍ಲಿ... ನಾಳೆಯಿಂದ ಸಂಜೆನೋ... ಬೆಳಗ್ಗೆನೋ ಒಂದರ್ಧ ಗಂಟೆ ನೀವು ನನಗಾಗಿ ಪುರುಸೊತ್ತು ಮಾಡ್ಕೊತೀರಾ...''

ತಮ್ಮಾಜಿ ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು.

''ಏನ್ ಮೇಡಂ ಹೀಗೆ ಹೇಳ್ತಿದೀರ. ನಿಮಗಾಗಿ ಅರ್ಧಗಂಟೆ ಏನು ಒಂದು ಗಂಟೇನೇ ಪುರುಸೊತ್ತು ಮಾಡ್ಕೊತೀನಿ. ಬೆಳಗ್ಗೆನೋ ಸಂಜೇನೋ ಅಲ್ಲ, ಬೆಳಗ್ಗೆನೂ ಎಸ್. ಸಂಜೇನು ಎಸ್. ಎರಡು ಹೊತ್ತೂ ಪುರುಸೊತ್ತು ಮಾಡ್ಕೊತೀನಿ... ಪಾಪ ನೀವು ಕೇಳೋದೇ ಅಪರೂಪ... ಹೌದು... ನನ್ ಕೆಲಸ'' ಅಂದು ಹಲ್‌ಕಿರಿದರು.

''ಹಾಗಾದ್ರೆ ಒಂದ್ ಕೆಲಸ ಮಾಡಿ... ನಾಳೆಯಿಂದ ಬೆಳಗ್ಗೆನೇ ನಮ್ಮನೆಗೆ ಪಾಠಕ್ಕೆ ಬಂದ್‌ಬಿಡಿ'' ಅಂದಳು ಶರ್ಮಿಳಾ.

''ನಿಮ್ಮನೆಗೆ... ನಾನು ... ಪಾಠಕ್ಕೆ...''

''ಹೌದು ನಾನು ಕೊಡೋ ಹೋಂವರ್ಕ್‌ನ ನೀವು ದಿನಾ ತಪ್ಪು ತಪ್ಪಾಗಿ ಮಾಡ್ಕೊಡ್ತಾ ಇದೀರ. ಪಾಪ ನಿಮ್ಮ ಮಕ್ಕಳು ಮೇಡಂ ನಮ್ತಂದೆ ಹೋಂವರ್ಕ್ ಮಾಡ್ಕೊಡ್ತಿದಾರೆ ಅವರು ಮಾಡ್ಕೊಡೋದೇ ಕರಕ್ಟು ಅಂತಿದಾರೆ ಅಂತ ಅಳ್ತಾರೆ. ಸೋ ಆವಾಗ ನನಗೆ ಅನಿಸಿದ್ದು ಮನೆ ಪಾಠ ಬರೀ ನಿಮ್ಮ ಮಕ್ಕಳಿಗಲ್ಲ ನಿಮಗೂ ಬೇಕು ಅಂತ. ಅದಕ್ಕೆ ಬೇರೆ ಫೀಸೇನು ಬೇಡ'' ಅಂದಳು ಶರ್ಮಿಳಾ.

ತಮ್ಮಾಜಿ ಸಿಡುಕು ಮೂತಿ ಮಾಡ್ಕೊಂಡು ಮನೆಗೆ ಬಂದರು ಇನ್ಮೇಲೆ ಯಾರಾದ್ರೂ ನನ್ನನ್ನ ಹೋಂವರ್ಕ್ ಮಾಡ್ಕೊಡು ಅಂದ್ರೆ ಸಿಗಿದು ಹಾಕಿಬಿಡ್ತಿನಿ ಅಂದು ಗುಡುಗಿದರು ಶಾಂತೂಗೂ ಮಕ್ಕಳಿಗೂ ತಮ್ಮಾಜಿ ಯಾಕೆ ಹೀಗೆ ಕೂಗಾಡಿದ್ರು ಅಂತ ಅರ್ಥನೇ ಆಗ್ಲಿಲ್ಲ.

★★★

ಹಾದಿಯಲ್ಲಿ ಕೇಳಿಸಿದ್ದು....

ಸಚಿನ್ ಮೊದಲ್ನೇ ಓವರ್‌ನಲ್ಲೇ ಔಟ್ ಆದ ತಕ್ಷಣ ಬಂದ ಆಡ್‌ನಲ್ಲಿ ಬ್ರಯಾನ್ ಲಾರ, ''ಟುಂ ಏಕ್ ಲಾಜವಾಬ್ ಕುಕ್ ಹೋ'' ಅಂದದ್ದು ಬಲೇ ಮಜವಾಗಿತ್ತು.

ಪತಿವ್ರತೆಯರ ಕೋಳಿ ಕಾಳಗ

- ಬಿ.ಆರ್. ನಾಗೇಶ್

ಅಕ್ಕಪಕ್ಕದ ಮನೆಗಳ ಇಬ್ಬರೂ ಬಾಯಿಗಳೇ - ಇಬ್ಬರೂ ಯಸ್ ಬಾಯಿಗಳೇ: ಒಬ್ಬರು ಸಾವಿತ್ರಿಬಾಯಿ, ಇನ್ನೊಬ್ಬರು ಸೀತಾಬಾಯಿ. ಯಾವ ಶುಭ ಗಳಿಗೆಯಲ್ಲಿ ಇವರ ಹೆತ್ತವರು ಈ ಪುಣ್ಯ ಹೆಸರುಗಳನ್ನು ಇವರಿಗೆ ಇಟ್ಟರೋ ತಿಳಿಯದು. ಅಂತೂ ಆ ಸೀತೆ ಆ ಸಾವಿತ್ರಿಯರಿದ್ದ ಕಲಿಯುಗದಲ್ಲಿಯೆ ಈ ಸೀತಾಬಾಯಿ ಸಾವಿತ್ರಿಬಾಯಿ ಇರುವುದು ಪತಿವ್ರತಾ ಧರ್ಮ ಇನ್ನು ಈ ದೇಶದಲ್ಲಿ ಉಸಿರೆಳೆದುಕೊಂಡಿರುತ್ತದೆ ಎಂಬುದಕ್ಕೆ ಪರಿಪೂರ್ಣ ಸಾಕ್ಷಿಯಾಗಿ ನಿಂತಿದೆ.

ಇವರಿಬ್ಬರು ಪತಿವ್ರತೆಯರೇ - ಹೆಚ್ಚು ಕಡಿಮೆ ಸೆಂಟ್‌ಪರ್‌ಸೆಂಟ್. ಇವರ ಪತಿವ್ರತಾ ಧರ್ಮದ ಮುಖ್ಯ ಲಕ್ಷಣವೆಂದರೆ ತಮ್ಮ ತಮ್ಮ ಗಂಡಂದಿರನ್ನು ತಮ್ಮ ತಮ್ಮ ಮುಷ್ಠಿಯೊಳಗೆಯೆ ಇರಿಸಿಕೊಳ್ಳುವ ಪ್ರಯತ್ನ ಮತ್ತು ತಮ್ಮ ತಮ್ಮ ಗಂಡಂದಿರ ಸತಿವ್ರತವನ್ನು ಸಂಶಯದಿಂದ ನೋಡುವ ಪ್ರೌಢ ಜಿಜ್ಞಾಸೆ.

ಇಂಥವರು ಅಕ್ಕ ಪಕ್ಕದ ಮನೆಯಲ್ಲಿರುವುದು ಸ್ವಾಭಾವಿಕವೆ. ಇಬ್ಬರದ್ದೂ ಬಾಡಿಗೆ ಮನೆ ಆದುದರಿಂದ, ಅವರ ಪತಿವ್ರತಾ ಧರ್ಮ ಬಹಳ ತೀಕ್ಷ್ಣವಾಗಿರುತ್ತದೆ. ಸ್ವಂತ ಮನೆಯಲ್ಲಿ ಪತಿವ್ರತೆಯರು ಉಸಿರಾಡುವುದು ಕಡಿಮೆ. ಪತಿವ್ರತೆಯರ ಕಾರುಬಾರುಗಳೆಲ್ಲಾ ಸಂಭವಿಸುವುದು ಬಾಡಿಗೆ ಮನೆಗಳಲ್ಲಿ ಮತ್ತು ಕನ್ನಡ ಧಾರಾವಾಹಿಗಳನ್ನು ತಪ್ಪದೆ ನೋಡುವುದರಲ್ಲಿ.

ಬಾಯಿ ಬಾಯಿಯರ ಒಳಗೆ ಕಣ್ಣುರಿ ಪ್ರಾರಂಭವಾದದ್ದು ಅವರವರ ಗಂಡಂದಿರು ತಮ್ಮ ತಮ್ಮನ್ನು ಬಿಟ್ಟು ಬೇರೆಯವರನ್ನು ಕಂಡು ಪ್ರಾಣಿ ಸಹಜವಾದ ನಗೆಯನ್ನು ಖರ್ಚು ಮಾಡಿದ್ದರಿಂದ. ಮನುಷ್ಯರ ಮುಖದಲ್ಲಿ ಎಷ್ಟೋ ಸ್ನಾಯುಗಳಿವೆ. ಈ ಸ್ನಾಯುಗಳಿಗೆ ಒಮ್ಮೊಮ್ಮೆಯಾದರೂ ವ್ಯಾಯಾಮ ದೊರೆಯಬೇಕಲ್ಲಾ. ಸ್ನಾಯುಗಳೆಲ್ಲಾ ಯಾವತ್ತೂ ಮುದುಡಿಕೊಂಡಿದ್ದರೆ, ತಾವು ಸತ್ತ ಬಳಿಕ ತಮ್ಮ ಹೆಣದ ಮುಖಭಾವ ಹೇಗಿರಬಹುದು ಎಂಬುದನ್ನು ಊಹಿಸಿಯೇ ಈ ಗಂಡಂದಿರಿಬ್ಬರು ನೆಗಾಡಿದ್ದು. ಗುಟ್ಟೇನೆಂದರೆ, ಅವರು ಮಹಾ ಪತಿವ್ರತೆಯರಾದ ತಮ್ಮ ಹೆಂಡತಿಯರನ್ನು ಕಂಡು ನಗುತ್ತಲೇ ಇರಲಿಲ್ಲ. ಮದುವೆಯಾದ ಮರುವರ್ಷದಿಂದಲೇ ನಗುವುದನ್ನು ನಿಲ್ಲಿಸಿಬಿಟ್ಟಿರುವ ಪುಣ್ಯಾತ್ಮರವರು.

ಇವರಿಬ್ಬರು ನೆರೆಕರೆ. ಒಬ್ಬರ ಮನೆಯಲ್ಲಿ ಸ್ವಲ್ಪ ದನಿ ಎತ್ತಿ ಮಾತನಾಡಿದರೆ ಇನ್ನೊಬ್ಬರ ಮನೆಯ ಕಿಟಿಕಿಯೊಳಗ ಆ ದನಿ ಹೋಗಿ, ಅವರ ಮನೆಯಲ್ಲಿ ಅದು ಧ್ವನಿವರ್ಧಕ ಸ್ವರೂಪವನ್ನು ತಾಳುತ್ತಿದ್ದುದು ಸ್ವಾಭಾವಿಕವೇ. ಈ ಸ್ವಾಭಾವಿಕ ಧ್ವನಿ ವರ್ಧಕ ಪರಿಣಾಮವನ್ನು ಅವರಿಬ್ಬರ ಮನೆಗಳಲ್ಲಿ ಗುಟ್ಟುಗಳು ಉಳಿಯುತ್ತಲೆ ಇರಲಿಲ್ಲ. ಗುಟ್ಟುಗಳಿಲ್ಲದ ಸಂಸಾರವೆಂದರೆ ಜಾಗತಿಕ ಸಂಸಾರ: ಸುವ್ಯವಸ್ಥಿತ, ಪಾರದರ್ಶಕತೆ ಇರುವ ಸಂಸಾರ - ರಾಜಕಾರಣಿಗಳ ಪಾರದರ್ಶಕದ ರೀತಿಯದು. ಕೆಲವೊಮ್ಮೆ ಪಾರದರ್ಶಕತೆ ಎಷ್ಟೆಷ್ಟು ತೆಳುವಾಗುತ್ತಿತ್ತೆಂದರೆ, ತಮ್ಮ ತಮ್ಮ ಮನೆಯೊಳಗೆ ಇನ್ನೊಬ್ಬರು ಬಂದು ಕಿವಿ ಚುಚ್ಚಿ ಮಾತನಾಡುವಷ್ಟು.

ಗಂಡಸರು ಹೆಂಗಸರನ್ನು ಕಂಡು ನಗುವುದು ನಮ್ಮ ದೇಶದಲ್ಲಿ ನಿಷಿದ್ಧ. ಈ ಕಾರಣಕ್ಕಾಗಿಯೆ ನಮ್ಮ ದೇಶದ ಹಲವು ಗಂಡಸರು ಒಂದಲ್ಲ ಒಂದು ನೆಪ ಮಾಡಿಕೊಂಡು ವಿದೇಶಗಳಿಗೆ, ಅದರಲ್ಲೂ ಅಮೇರಿಕಕ್ಕೆ ವಲಸೆ ಹೋಗುವುದು. ಅಲ್ಲಿಯ ನಗುವಿಗೆ ಸೀಮೆ ಇಲ್ಲ ನಿಸ್ಸೀಮ ಅದು. ಅಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚು ನಗುತ್ತಾರೆ! ನಗು ಅವರ ಭಂಡವಾಳ ತಾನೇ? ಅಮೇರಿಕಾ ಭಂಡವಾಳಶಾಹಿ ದೇಶವಲ್ಲವೇ? ಆ ಭಂಡವಾಳವನ್ನು ಅವರು ಸಶಕ್ತರಾಗಿ ಉಪಯೋಗಿಸಿಕೊಳ್ಳುತ್ತಾರೆ. ನಮ್ಮಲ್ಲಿಯಾದರೆ, ಹೆಂಗಸರು ನಗುವನ್ನು ಪೂರ್ವಜನ್ಮದಲ್ಲಿ ಬಿಟ್ಟು ಬಿಟ್ಟು ಈ ಜನ್ಮಕ್ಕೆ ಬಂದವರಂತೆ ನಟಿಸುತ್ತಾರೆ. ಅದಂತೂ ತಮ್ಮ ಗಂಡಂದಿರು ಬೇರೆ ಹೆಂಗಸರನ್ನು ಕಂಡು ನಕ್ಕುಬಿಟ್ಟರೆ, ಅವರ ದೃಷ್ಟಿಯಲ್ಲಿ ಅವರ ಅರುಂಧತಿತ್ವ ಮಸುಕಾದಂತೆ.

ಮದುವೆಯಾಗಿ ಇಪ್ಪತ್ತು ವರ್ಷಗಳಷ್ಟು ಕಾಲ, ಬದಿ ಮನೆಗಳಲ್ಲಿ ಇದ್ದವರು, ಪರಸ್ಪರ ಗೊತ್ತಿಲ್ಲದಂತೆ ಹೇಗೆ ಬದುಕಿದರೋ ತಿಳಿಯದು. ಹಾಗೆಂದು ಎರಡು ಬಾಯಿಗಳೊಳಗೆ ಇಪ್ಪತ್ತು ವರ್ಷಗಳಷ್ಟು ಕಾಲದ್ವೇಷವಿರಲಿಲ್ಲ. ಮೆಣಸಿನಕ್ಕಾ, ಸಕ್ಕರೆ, ಗೋಧಿ ಹಿಟ್ಟು - ಇತ್ಯಾದಿಗಳ ಕೊಡು ಕೊಳ್ಳುವಿಕೆಗೆ ಯಾವ ರೀತಿಯ ವ್ಯತ್ಯಯ ಬರುತ್ತಿರಲಿಲ್ಲ. ಐದು ಮೆಣಸಿನಕಾಯಿ ಸಾಲವಾಗಿ ಪಡೆದು ನಾಲ್ಕನ್ನು ಮಾತ್ರ ಹಿಂತಿರುಗಿಸಿದಾಗ ಕೆಲವೊಮ್ಮೆ ಸಣ್ಣ ಪುಟ್ಟ ಘರ್ಷಣೆಗಳಾಗುತ್ತಿದ್ದವು. ಗೋಧಿ ಹಿಟ್ಟು ಅವರ ತುಟಿಗಳನ್ನು ಮುರುಟಿಸಿದ್ದು ಎಂದಿತ್ತು. ಒಬ್ಬರು ಹೊಸ ಸೀರೆ ಉಟ್ಟರೆ ಒನ್ನೊಬ್ಬರು ಅಡಿಕಣ್ಣಿನಿಂದ ಅದನ್ನು ನೋಡಿ, ಎದುರಿಗಿರುವ ಗೋಡೆಯನ್ನು ಕಂಡು "ಏನವ್ವಾ - ಎಂಥಾ ಬಣ್ಣ - ನೋಡುವವರ ಕಣ್ಣು ಹೋದೀತು" ಎಂದು ಗಟ್ಟಿಯಾಗಿ ಹೇಳುವ ಸಂಪ್ರದಾಯವಿತ್ತು. ಎರಡು ಬಾಯಿಯರೊಳಗೆ ನಡೆಯುತ್ತಿದ್ದ ಈ ಶೀತಲ ಯುದ್ಧ ಸಮಯದಲ್ಲಿ, ಗಂಡಂದಿರು

ಮೌನವಾಗಿ ತಮ್ಮ ತಮ್ಮ ಮನೆಯೊಳಗೆ ಇದ್ದು, ಹೆಂಡತಿಯರು ಎದುರಿನಲ್ಲಿಲ್ಲ ಎಂದು ತಿಳಿದು, ಮನಸಾರೆ ನಗುತ್ತಿದ್ದರು.

ಪುಣ್ಯಕ್ಕೆ ಎರಡೂ ಬಾಯಿಯರಿಗೆ ಮಕ್ಕಳಿರಲಿಲ್ಲ - ಹಾಗಾಗಿ ಅವರ ಪವಿತ್ರತಾ ಧರ್ಮ ಹಾಗೆಯೆ ಉಳಿದಿತ್ತು - ಮಕ್ಕಳ ಮಲಮೂತ್ರ ಸಂಪರ್ಕ ಇಲ್ಲದೆ.

ಇಷ್ಟು ಸುಖಿಗಳಾಗಿದ್ದ ಬಾಯಂದಿರು, ಜಗಳಕ್ಕೆ, ಕಾಳಗಕ್ಕೆ ಪ್ರಾರಂಭಿಸಿದ್ದು, ಮಲ್ಲೇಶ್ವರದ ಮೈದಾನಿನಲ್ಲಿ ಆರಂಭಗೊಂಡು ಸಾಗುತ್ತಿದ್ದ ಒಂದು ವಸ್ತುಪ್ರದರ್ಶನದ ಮಧ್ಯಸ್ಥಿಕೆಯಿಂದ. ಅವರಿಗೆ ತಿಳಿಯದೆ ಇವರು ಇವರಿಗೆ ತಿಳಿಯದೆ ಅವರು ವಸ್ತು ಪ್ರದರ್ಶನಕ್ಕೆ ಹೋಗಿದ್ದರು. ಬೆತ್ತದ ಪೀಠೋಪಕರಣ ವಿಭಾಗದಲ್ಲಿ ಸೀತಾಬಾಯಿ ಒಂದು ಕುರ್ಚಿಯಲ್ಲಿ ಕುಳಿತಿದ್ದು, ಕುರ್ಚಿಯ ತೂಕ ಹೊರುವ ಸಾಮರ್ಥ್ಯವನ್ನು ಪರೀಕ್ಷಿಸುತ್ತಿದ್ದರು. ಆಗ ಅಲ್ಲಿಂದಲೇ ಹಾದು ಹೋಗುತ್ತಿದ್ದ ಸಾವಿತ್ರಿ ಬಾಯಿಯ ಗಂಡ ''ಕುರ್ಚಿ ಹೇಗುಂಟು? ಭಾರ ತಡೆದುಕೊಳ್ಳುತ್ತದಾ?'' ಎಂದು ನಗೆಯಾಡುತ್ತಾ ಕೇಳಿದರು - ಅದು ತನ್ನ ಮದುವೆಯ ಬಳಿಕದ, ನಲುವತ್ತು ಪ್ರಾಯದ ಪ್ರಥಮ ಮಹಾಸ್ಯ ಎಂಬಂತೆ. ಸೀತಾಬಾಯಿ ತೆಗೆದ ಬಾಯಿಗೆ ''ನಿಮ್ಮ ಹೆಂಡತಿಯ ಭಾರ ತಡೆದುಕೊಳ್ಳುವುದು ಕಷ್ಟ'' ಎಂದು ಹೇಳಿ ಮರುನಗೆ ಸೂಸಿದರು. ಈ ನಗುಗಳ ವ್ಯವಹಾರವನ್ನು ಕಾಣುತ್ತಿದ್ದ ಸಾವಿತ್ರಿಬಾಯಿಯವರ ಮುಖ ಕೆಂಪಾಯಿತು - ತುಟಿಗಳು ನಡುಗಿದವು. ತನ್ನ ಬಳಿ ನಿಂತಿದ್ದ ಗಂಡನನ್ನು ಎಳೆದುಕೊಳ್ಳುತ್ತಾ ''ಬೇರೆ ಹೆಂಗಸರೊಡನೆ ಮಾತನಾಡಲು ನಾಚುಗೆ ಆಗುವುದಿಲ್ಲವೇ? ನಗಬೇಕಾದರೆ ಅವರ ಮುಖ ನೋಡಿ ನಗಬೇಕೇ? ನಾನಿಲ್ಲವೇ?'' ಎಂಬ ಉದ್ಘೋಷ ಹೊರಡಿಸಿದರು. ಸೀತಾಬಾಯಿ ಗಂಡ ಈ ಜಾಣ ಮಾತುಗಳನ್ನು ಕೇಳಿ, ಆನಂದ ತುಂದಿಲರಾಗಿ, ಸಾವಿತ್ರಿ ಬಾಯಿಯನ್ನು ಕಂಡು ಬಾಯಿತುಂಬಾ ನಕ್ಕುಬಿಟ್ಟರು! ಸಾವಿತ್ರಿ ಬಾಯಿಯ ನಗೆಯನ್ನು ಹಿಂತಿರುಗಿಸಿದರು ಇದನ್ನು ಸೀತಾಬಾಯಿ ಕಂಡರು.

ನಾಲ್ವರೂ ಅಲ್ಲಿಂದ ಬೇರೆಯಾದರೂ - ಐಸ್‌ಕ್ರೀಂ ಮಾರುವಲ್ಲಿ ತಿರುಗಿ ಒಂದುಗೂಡಿಸಿದರು. ತಮ್ಮ ಗಂಡಂದಿರ ಎದುರು ತಾವು ಏನನ್ನೂ ತಿನ್ನಬಾರದು ಎಂಬ ಪತಿವ್ರತಾ ಧರ್ಮ ಸೂಕ್ತಿಯಂತೆ, ಗಂಡಂದಿರಿಗೆ ಬೆನ್ನುಹಾಕಿ, ಐಸ್‌ಕ್ರೀಂ ನೆಕ್ಕತೊಡಗಿದರು. ಆಗ ಗಂಡಂದಿರು ಬೇರೆಯವರ ಹೆಂಡತಿಯನ್ನು ಐಸ್‌ಕ್ರೀಂ ಹೇಗೆ ತಿನ್ನುತ್ತಾರೆ ಎಂದು ಕೂಲಂಕುಷರಾಗಿ ನೋಡುವಂತಾಯಿತು. ಈ ಘಟನೆಗಳಿಂದಾಗಿ ಅವರಿಬ್ಬರ ಪತಿವ್ರತಾ ಧರ್ಮ ಘನವಾಯಿತು.

ಈ ಘಟನೆಯಾದ ಒಂದು ವಾರದೊಳಗೆ ಪತಿವ್ರತಾ ಕೋಳಿ ಕಾಳಗಕ್ಕೆ ಸಿದ್ಧತೆ ಪ್ರಾರಂಭವಾಯಿತು. ಇದಕ್ಕೆ ಕಾರಣ ಇಬ್ಬರು ಬಾಯಿಯವರೂ ತಮ್ಮ ಧ್ವನಿವರ್ಧಕ ಗಂಟಲಿಂದ, ಪರಸ್ಪರರ ಪತಿವ್ರತಾ ಧರ್ಮವನ್ನು ವಿಶ್ಲೇಷಿಸಿದ್ದು. ಆಗಲೆಲ್ಲಾ ಅವರ ಬಾಯಿಯಿಂದ ಉದುರಿದ ಹೆಣ, ವ್ಯಭಿಚಾರಿ (ಇದರ ಗ್ರಾಮ್ಯರೂಪ). ನಾಚಿಕೆ ಇಲ್ಲದವಳು, ನೀತಿಕೆಟ್ಟವಳು, ಭಾರತಾಂಬೆಯ ಕುಪುತ್ರಿ, ಗಂಡನನ್ನು ಮುಷ್ಠಿಯೊಳಗೆ ಇಟ್ಟುಕ್ಕೊಳ್ಳಲು ಸಾಧ್ಯ ಆಗದವಳು - ಎಂಬಿತ್ಯಾದಿ ಶಬ್ದಕೋಶದಲ್ಲಿ ಕಾಣಸಲಾರದ ಶಬ್ದಗಳು ಉದುರಿದವು. ಇದನ್ನು ಕೇಳಿ ಕೇಳಿ ಕಿವಿ ಕಳೆದುಕೊಳ್ಳಲು ಸಿದ್ಧರಾಗಿದ್ದ ಗಂಡಂದಿರು; ಒಂದು ದಿನ ತಮ್ಮ ತಮ್ಮ ಹೆಂಡತಿಯರ ಮುಂದೆ ಕಾರ್ಯಸೂಚಿಯೊಂದನ್ನು ಮುಂದಿಟ್ಟರು. ಅದು ಹೀಗಿತ್ತು: ಸೀತಾಬಾಯಿ ಮತ್ತು ಸಾವಿತ್ರಿಬಾಯಿ, ಕತ್ತಿ ಕತ್ತಿ ಹಿಡಿದುಕೊಂಡು, ಇನ್ನೂರ ಐವತ್ತು ಮುತ್ತೈದೆಯರ ಎದುರು ಕಾಳಗ ಮಾಡಬೇಕು. ಕತ್ತಿ ಸಾಕಷ್ಟು ಹರಿತವಾಗಿರಬೇಕು. ಈ ಕತ್ತಿ ಕಾಳಗದಲ್ಲಿ ಕುತ್ತಿಗೆಯನ್ನು ಕಳೆದುಕೊಂಡವರು ಅರುಂಧತಿ ನಕ್ಷತ್ರದ ಹತ್ತಿರ ಹೋಗಿ ಮಿನುಗುತ್ತಾರೆ. ಇದರಿಂದ ನಿಜವಾದ ಪತಿವ್ರತೆ ಯಾರು ಎಂದು ನಿರ್ಣಯವಾಗುತ್ತದೆ - ಎಂದು. ಇಬ್ಬರೂ ಸೂಚನೆಗೆ ತಕ್ಷಣವೆ ಒಪ್ಪಿಗೆ ಕೊಟ್ಟರು. ಎಷ್ಟೆಂದರೂ ಹರಿತವಾದ ಕತ್ತಿ ತಾನೇ? ಎದುರಾಳಿಗೆಯ ಕುತ್ತಿಗೆಗೆ ಗುರಿ ಇಟ್ಟು ಬೀಸಿದರೆ, ಹಲಸಿನ ಹಣ್ಣನ್ನು ಕೊಯ್ದಷ್ಟು ಸುಲಭವಾಗಿ ಕೆಲಸ ಸಾಧಿಸಬಹುದು ಎಂದು ಇಬ್ಬರೂ ತಿಳಿದರು. ಕಾರ್ಯಕ್ರಮದ ಎಲ್ಲಾ ಏರ್ಪಾಡುಗಳನ್ನು ತಮ್ಮ ಗಂಡಂದಿರಿಗೆ ವಹಿಸಿಕೊಟ್ಟರು.

ಬರಹದ ಈ ಭಾಗದಲ್ಲಿ ಒಂದು ಚಿಕ್ಕ ವಿವರಣೆ ಬೇಕಾಗಬಹುದು. ಮುಖ್ಯವಾಗಿ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಪತಿವ್ರತೆಯರ ನಡುವೆ ಸಾಕಷ್ಟು ಅಂತರವಿದೆ - ಎಂದು ಊಹಿಸಬೇಕಾಗಿದೆ. ಉತ್ತರ ಭಾರತದ ಪತಿವ್ರತೆಯರು ನಕ್ಷತ್ರ ಕಡ್ಡಿ ಬ್ರ್ಯಾಂಡಿನವರಾದರೆ, ದಕ್ಷಿಣದ ಪತಿವ್ರತೆಯರು ಆಟಂ ಬಾಂಬು ಬ್ರ್ಯಾಂಡಿನವರು.

ದಕ್ಷಿಣ ಭಾರತದ ಪತಿವ್ರತೆಯರ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು (ಅ) ಇವರು ಮದುವೆಯಾದ ಕ್ಷಣದಿಂದ ನಗುವನ್ನು ನಿಲ್ಲಿಸಿಬಿಟ್ಟಿರುತ್ತಾರೆ. (ಆ) ಪುಡಿ ಕುಂಕುಮವನ್ನೇ ಬಳಸುತ್ತಾರೆ (ಇ) ಇವರಿಗೆ ಮೃದುವಾಗಿ ಮಾತನಾಡಿ ಅಭ್ಯಾಸವೇ ಇರುವುದಿಲ್ಲ (ಈ) ಧ್ವನಿ ದಾರ್ಢ್ಯತೆ ಇದೆ. (ಉ) ಟಿವಿಯ ಎದುರು ಕುಳಿತಾಗ, ತಮ್ಮದೇ ಮೆಚ್ಚಿನ ಧಾರಾವಾಹಿಗಳಿಂದ ಕಿವಿ ಕಣ್ಣುಗಳನ್ನು ತುಂಬಿಕೊಳ್ಳುತ್ತಾರೆ. (ಊ) ಬೇರೆ ಯಾವ ಹೆಂಗಸರನ್ನು ಕಂಡರೂ

ತಮ್ಮ ವೈರಿಗಳೆಂದು ತಿಳಿಯುತ್ತಾರೆ (ಎ) ಜಗಳ ತೆಗೆಯಲು ಇವರು ಕಾಯುವುದಿಲ್ಲ - ತಾವಾಗಿಯೇ ಜಗಳ ಪ್ರಾರಂಭಿಸಿ, ಅದು ಮುಕ್ತಾಯವಾಗದಂತೆ ಮಾಡುತ್ತಾರೆ (ಏ) ಮೈ ತುಂಬಾ ಸೆರಗು ಹೊದ್ದುಕೊಂಡು, ಜಡೆತುಂಬಾ ಹೂ ಮುಡಿದುಕೊಂಡು ಆಗಾಗ ದೇವಸ್ಥಾನಗಳಿಗೆ ಹೋಗುತ್ತಾರೆ. ದೇವಸ್ಥಾನದಲ್ಲಿ ದೇವರ ದರ್ಶನಕ್ಕಿಂತ ಹೆಚ್ಚಾಗಿ ಅಲ್ಲಿ ಬಂದಿರುವ ಉಳಿದ ಹೆಂಗಸರನ್ನು ಪರೀಕ್ಷಿಸುತ್ತಾರೆ. (ಐ) ಕಲ್ಲಿನ ದೇವರಾದರೂ, ಇರನ್ನು ಕಂಡೊಡನೆ ಕಣ್ಣು ಮುಚ್ಚಿಕೊಳ್ಳುತ್ತಾರೆ - ಅಂಥಾ ಅಸಾಧ್ಯ ಸಂಶಯದ ಹೊಳಪು ಇವರ ಕಣ್ಣುಗಳಲ್ಲಿ ಇರುತ್ತದೆ. ನಮ್ಮ ಧರ್ಮ ಈ ದೇಶದಲ್ಲಿ ಇನ್ನು ಇಳಿದಿರುವುದು ಈ ರೀತಿಯ ಪತಿವ್ರತೆಯರಿಂದಲೇ.

ಈ ಪಟ್ಟಿಯನ್ನು ಸರಕಾರದ ಸಾಧನೆಗಳ ಪಟ್ಟಿಯಂತೆ ಇನ್ನೂ ಬೆಳಸಬಹುದು. ಸದ್ಯಕ್ಕೆ ಇಷ್ಟೆ ಸಾಕು.

ಇನ್ನು ಎರಡು ಬಾಯಿಯವರ ಭಾವಚಿತ್ರ ವಿವರಣೆ. ಸೀತಾಬಾಯಿ ನಾಲ್ಕು ಅಡಿಯಷ್ಟು ಉದ್ದ ಮತ್ತು ಅಷ್ಟೆ ಅಗಲವಿರುವುದರಿಂದ, ಒಂದು ರೀತಿಯ ಅಂಡಾಕೃತಿಯವರಾದುದರಿಂದ, ಅವರ ದೇಹದ ಚಲನೆ ನೋಡುಗರಿಗೆ ಯಾವತ್ತೂ ಸಮಸ್ಯೆಯೆ. ಹಣೆಯಲ್ಲಿ ಇಷ್ಟಗಲ ಕುಂಕುಮ. ತಲೆತುಂಬಾ ಕನಕಾಂಬರ ಹೂ ಮುಡಿದುಕೊಂಡಿರುತ್ತಾರೆ. ಹಳೆ ಕಾಲದ ಸೀರೆ ಉಟ್ಟಿರುತ್ತಾರೆ. ಮಕ್ಕಳು ಇಲ್ಲದುದರಿಂದ ಎದೆಭಾಗ ಇಡಿಯ ದೇಹದ ಅಂಡಾಕೃತಿಯಲ್ಲಿ ಕಾಣದಂತಾಗಿದೆ.

ಸಾವಿತ್ರಿ ಬಾಯಿ ಐದಡಿ ಎಂಟು ಇಂಚು ಉದ್ದ. ಅವರ ಕಾಲುಗಳು ನೀಳವಾಗಿವೆ. (ಸೀತಾಬಾಯಿ ಕೆಲವೊಮ್ಮೆ ಸಾವಿತ್ರಿ ಬಾಯಿಯ ಕಾಲುಗಳನ್ನು ಕಂಡು ''ಇಸ್ಸಪ್ಪ - ಬೇರೆವರಿಗೆ ಕಾಲುಗಳನ್ನು ತೋರಿಸಲೆಂದೆ ಸೀರೆಯನ್ನು ಎತ್ತಿ ಕಟ್ಟಿಕೊಳ್ಳುತ್ತಾಳೆ'' - ಎಂದು ಹೊಗಳುವುದಿತ್ತು). ನಡುಗೆ ತೂಗುಯ್ಯಾಲೆಯಂತೆ ಇರುವುದರಿಂದ ಅವರ ಆಕರ್ಷಕ ಮೈ ಕಟ್ಟು ಯಾರ ಕಣ್ಣಿಗೂ ಬೀಳುವುದಿಲ್ಲ. ಕೂದಲು ಚಿಕ್ಕದಾದುದರಿಂದ ತಲೆತುಂಬಾ ಹೇರ್‌ಪಿನ್‌ಗಳಿರುತ್ತವೆ.

ಸರಿ. ಮಲ್ಲೇಶ್ವರದ ಮೈದಾನಿನಲ್ಲಿ ಅವರಿಬ್ಬರ ಕಾಳಗ ಜರಗುತ್ತದೆಂದು ನಿಶ್ಚಯವಾಯಿತು. ಮಲ್ಲೇಶ್ವರವನ್ನೆ ಆರಿಸಿದಕ್ಕೆ ಮುಖ್ಯ ಕಾರಣ - ಇಲ್ಲಿನ ಮದುವೆಯಾದ ಹೆಂಗಸರಲ್ಲಿ ಅತ್ಯಧಿಕ ಎಂದರೆ 85% ಪತಿವ್ರತೆಯರು ಇದ್ದಾರೆ - ಎಂಬ ಲೆಕ್ಕಾಚಾರದಂತೆ.

ಇಬ್ಬರ ಗಂಡಂದಿರಿಗೂ ಖುಷಿಯೇ ಖುಷಿ. ತಮ್ಮ ತಮ್ಮ ಹೆಂಡಂದಿರು ಗೆಲ್ಲಬೇಕೆಂಬ ಒಂದೇ ಉದ್ದೇಶದಿಂದ ತಮ್ಮ ತಮ್ಮ ಹೆಂಡಂದಿರು

ಉಪಯೋಗಿಸಬೇಕಾದ ಕತ್ತಿಗಳನ್ನು ಹರಿತ ಮಾಡಿದ್ದೆ ಮಾಡಿದ್ದು. ಇವರೊಳಗಿನ ಪಂದ್ಯಕ್ಕೆ "ಪತಿವ್ರತಾ ಧರ್ಮಯುದ್ಧ" ಎಂಬ ಹೆಸರನ್ನಿಟ್ಟರು. ಕರಪತ್ರ ಹೊರಡಿಸಿದರು. ಕೇವಲ 250 ಜನರಿಗೆ ಮಾತ್ರ ಪ್ರವೇಶ. ಟಿಕೇಟು ದರ ನೂರು ರೂಪಾಯಿ ಎಂದು ಪ್ರಕಟಿಸಲಾಯಿತು. ಈ ಕಾಳಗವನ್ನು ನೋಡಲು ಗಂಡಸರು ಬರುವಂತಿಲ್ಲ - ಎಂಬ ವಿಶೇಷ ಸೂಚನೆಯೂ ಇತ್ತು, ಕಲಿಯುಗದಲ್ಲಿ ಪ್ರಥಮ ಬಾರಿ ನಡೆಯಲಿರುವ ಈ ಪತಿವ್ರತಾ ಧರ್ಮಯುದ್ಧವನ್ನು ನೋಡುವ ಅವಕಾಶವನ್ನು ಪತಿವ್ರತೆಯರು ಬರಿಯ ನೂರು ರೂಪಾಯಿಗಳಲ್ಲಿ ಕಾಣಬಹುದು - ಎಂಬಿತ್ಯಾದಿ ವಿವರಗಳಿದ್ದ ಕರಪತ್ರಗಳವು.

ಧರ್ಮಯುದ್ಧದ ದಿನ ಮಲ್ಲೇಶ್ವರ ಮೈದಾನಿನಲ್ಲಿ ಶಾಮಿಯಾನ ಎದ್ದಿತು. ಮಧ್ಯಭಾಗ ಕಾಳಗಕ್ಕೆ ಮೀಸಲು. ಉಳಿದ ಭಾಗಗಳಲ್ಲಿ 250 ಕುರ್ಚಿಗಳನ್ನು ವೃತ್ತಾಕಾರದಲ್ಲಿ ಜೋಡಿಸಿ ಇಟ್ಟಿದ್ದರು. ಮುತ್ತೈದೆಯರ ನೂಕು ನುಗ್ಗಲು ಪುಣ್ಯವಂತರಾದ 250 ಮಂದಿಗೆ ಮಾತ್ರ ಟಿಕೇಟು ದೊರೆಯಿತು.

ಆ ದಿನ ಬೆಳಗ್ಗಿನಿಂದಲೆ ಇಬ್ಬರು ಬಾಯಿಯರೂ ಉಪವಾಸ ಇದ್ದರು. ಬರಿಯ ಎಳನೀರು ಹಣ್ಣುಗಳಿಂದಲೇ ಹೊಟ್ಟೆ ತುಂಬಿಸಿಕೊಂಡರು. ಕಾಳಗ ಸಂಜೆ ಆರು ಗಂಟೆಗೆ ಪ್ರಾರಂಭವಾಗಲಿತ್ತು. ಅದು ತನಕ ಬರಿ ಹೊಟ್ಟೆಯಲ್ಲಿ ಇರಲು ಇಬ್ಬರು ಬಾಯಂದಿರಿಗೂ ಸಾಧ್ಯವಾಗದ ಕಾರಣ ಒಂದಷ್ಟು ಎಳನೀರು, ಒಂದಷ್ಟು ದ್ರಾಕ್ಷಿ, ಒಂದಷ್ಟು ಏಲಕ್ಕಿ ಬಾಳೆ, ಒಂದಷ್ಟು ಮುಸುಂಬಿ, ಒಂದಷ್ಟು ಸೇಬು ಹಣ್ಣುಗಳನ್ನು ತಿಂದಿದ್ದರು. ಅವರು ಆ ರೀತಿಯಾಗಿ ತಿನ್ನುವುದನ್ನು ನೋಡಿಯೆ ಅವರವರ ಗಂಡಂದಿರಿಗೆ ಸಂತೋಷವಾಯಿತು - ಕಣ್ಣೀರು ಬಂತು. ತಮ್ಮ ತಮ್ಮ ಹೆಂಡತಿಯರು ಈ ಕಾಳಗದಲ್ಲಿ ಗೆಲ್ಲಬೇಕೆಂದು ಬಹಿರಂಗವಾಗಿ ಮಾತಾಡಿಕೊಂಡರೂ, ಒಳ ಒಳಗಿನಿಂದ ಕತ್ತಿ ಪೆಟ್ಟಿನಿಂದ ತಮ್ಮ ತಮ್ಮ ಹೆಂಡಂದಿರು ಮೈನರ್ ಅರುಂಧತಿ ಆಗಲಿ ಎಂದು ಬಯಸಿದರು.

ಇಬ್ಬರೂ ದೊಡ್ಡ ದೊಡ್ಡ ಕುಂಕುಮ ಇಟ್ಟು, ಇದ್ದಬಿದ್ದ ಕೂದಲನ್ನು ಶಿವಜಡೆಯಂತೆ ಕಟ್ಟಿ, ದೊಡ್ಡ ದೊಡ್ಡ ಹೂಮಾಲೆಗಳನ್ನು ಮುಡಿದುಕೊಂಡು, ತಮ್ಮ ತಮ್ಮ ಮದುವೆಯ ಧಾರೆ ಸೀರೆಗಳನ್ನು ಉಟ್ಟುಕೊಂಡು ಬಂದಿದ್ದರು. ಅವರವರ ಕತ್ತಿಗಳು ಅವರವರನ್ನು ಹಿಂಬಾಲಿಸಿದ್ದವು - ಗಂಡಂದಿರ ಮೂಲಕ.

ಎರಡೂ ಬಾಯಿಯವರು ಎದುರೆದುರಾಗಿ ನಿಂತು, ಒಬ್ಬರನ್ನೊಬ್ಬರು ಹೀನ ಮಾತುಗಳಿಂದ ಬೈಯುತ್ತಾ, ಒಬ್ಬರನ್ನೊಬ್ಬರು ಸಮೀಪಿಸಬೇಕು - ಅಷ್ಟರಲ್ಲಿ

ಅವರವರ ಗಂಡಂದಿರು ತಮ್ಮ ತಮ್ಮ ಹೆಂಡಂದಿರ ಬಲಗೈಗೆ ಕತ್ತಿ ಕಟ್ಟಿರುತ್ತಾರೆ. ಇಬ್ಬರಲ್ಲಿ ಒಬ್ಬರು ವಿಸಿಲ್ ಊದಿದರು. ಕೂಡಲೇ ಕೈಕೆ ಕಟ್ಟಿದ ಕತ್ತಿಗಳನ್ನು ಬೀಸಲಾರಂಭಿಸಿದರು - ಬಾಯಿಯವರು. ಮೂರು ನಿಮಿಷ ಕಾಳಗದ ಬಳಿಕ ಒಂದು ವಿರಾಮ. ಕತ್ತಿ ಏಟು ಪರಸ್ಪರರಿಗೆ ಬೀಳುತ್ತಿದ್ದಾಗಲೆಲ್ಲಾ ಪ್ರೇಕ್ಷಕ ವರ್ಗದಿಂದ ''ಜೈ ಸೀತಾಮಾತೆ, ಜೈ ಸಾವಿತ್ರಿ ಮಾತೆ'' ಎಂಬ ಘೋಷಣೆ ಕೇಳುತ್ತಿತ್ತು. ಮೂರು ಸುತ್ತಿನ ಕಾಳಗ ಮುಗಿಯುವ ಹೊತ್ತಿಗೆ ಇಬ್ಬರ ಕೈ ಕಾಲುಗಳಿಗೆ ಸಾಕಷ್ಟು ಗಾಯಗಳಾಗಿ ರಕ್ತ ಹರಿಯುತ್ತಿತ್ತು - ಗಂಡಂದಿರಿಗೆ ಈ ರಕ್ತದ ಹರಿವು ಕಂಡು ಸಂತೋಷವೇ ಸಂತೋಷ.

ಇನ್ನೇನು ಕೊನೆಯ ಸುತ್ತು ಪ್ರಾರಂಭವಾಗಬೇಕು - ಇದರಲ್ಲಿ ಯಾವ ಪತಿವ್ರತೆ ಜೀವ ಕಳೆದುಕೊಳ್ಳುತ್ತಾಳೆಯೊ ಅವಳು ಅರುಂಧತಿ ನಕ್ಷತ್ರದ ಬಳಿ ನಕ್ಷತ್ರವಾಗುತ್ತಾಳೆ - ಉಳಿದವಳು ಮಹಾ ಪತಿವ್ರತೆ ಎಂಬ ಬಿರುದು ತಾಳಿ, ಪ್ರೇಕ್ಷಕ ವೃಂದದಿಂದ ಪೂಜಿಸಲ್ಪಡುತ್ತಾಳೆ.

ಬಾಯಿಯರಿಬ್ಬರು ರಂಗಸ್ಥಳದ ಎದುರು ಮೂಲೆಯಿಂದ, ಬಲಕೈಗೆ ಕಟ್ಟಿದ್ದ ಕತ್ತಿಯನ್ನು ಝಳಪಿಸುತ್ತಾ ಮುಂದೊತ್ತಿದಾಗ, ಫಕ್ಕನೆ ದೀಪಗಳೆಲ್ಲವೂ ಆರಿಹೋದವು (ಬೆಂಗಳೂರು ತಾನೆ?) ಮುಂದೆ ಬಂದಿದ್ದ ಪತಿವ್ರತೆಯರು, (ಕತ್ತಲಲ್ಲಿಯೂ ಅವರು ಪತಿವ್ರತೆಯರು ತಾನೆ?) ಕತ್ತಲಲ್ಲಿಯೆ ಕತ್ತಿಯ ಝಳಪಿಸಿದರು. ಅವರಿಬ್ಬರನ್ನು ಹಿಡಿಯಲು ಬಂದಿದ್ದ ಗಂಡಂದಿರ ''ಅಯ್ಯಯ್ಯೊ - ನನ್ನನ್ನು ಕೊಂದಳಪ್ಪಾ'' ಎನ್ನುವ ಕೂಗು ರಂಗಸ್ಥಳವನ್ನು ತುಂಬಿತು. ಬೆಳಕು ಹೋದ ಸಮಯ, ತಮ್ಮನ್ನು ಅಪ್ಪಿ ಹಿಡಿದವರು ತಮ್ಮ ಎದುರಾಳಿಗಳೇ ಎಂದು, ಅವರ ಕತ್ತಿಗೆ ಏಟು ಹಾಕಿದ್ದರು. ಬಳಿಕ ಕೆಳಗೆ ಉರುಳಿ ಬಿದ್ದ ದೇಹಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ತಾವು ಗೆದ್ದೆವು ಎಂಬ ಹೆಮ್ಮೆಯಿಂದ ''ಹುಯ್ಯೋ'' ಎಂದರು. ಅಷ್ಟರಲ್ಲಿ ಬೆಳಕು ಬಂತು. ಸೀತಾಬಾಯಿ ಸಾವಿತ್ರಾಯಿಯ ಗಂಡನನ್ನೂ, ಸಾವಿತ್ರಿಬಾಯಿ ಸೀತಾಬಾಯಿಯ ಗಂಡನನ್ನೂ ಹಿಡಿದುಕೊಂಡಿದ್ದರು. ಆದರೆ ಅವರಿಬ್ಬರು ಆ ಧರ್ಮಯುದ್ಧದಲ್ಲಿ ಪ್ರಾಣ ಕಳೆದುಕೊಂಡಿದ್ದರು.

ಅಂದು ರಾತ್ರಿ ಅರುಂಧತಿ ನಕ್ಷತ್ರದ ಇಬ್ಬದಿಯಲ್ಲಿ ಎರಡು ಪುಟ್ಟ ಕೆಂಪು ನಕ್ಷತ್ರಗಳು ಕಾಣಿಸಿಕೊಂಡಿದ್ದವಂತೆ. (ಮದುವೆಯಾದ ಬಳಿಕ ಗಂಡಂದಿರ ಕಾಲುಗಳನ್ನಷ್ಟೆ ಕಂಡ ಮುತ್ತೈದೆಯರ ಕ್ಷಮೆ ಕೇಳಿ)

★★★

ಮರವು

– ವನಜ ಚಂದ್ರಶೇಖರ್

ಅಯ್ಯ! ಇದೇನಪ್ಪಾ, ''ಮರವು'' ಸಹಜವಾಗಿ ಎಲ್ಲರಿಗೂ ಬರುವಂತದೆ. ಇದರಲ್ಲೇನು ವಿಶೇಷಾ; ಇದರ ಬಗ್ಗೆ ಬರೆಯುಕ್ಕೆ ಅಂದ್ರಾ... ಖಂಡಿತಾ ಇದೆ, ನಮ್ಮ ಪದ್ದಕ್ಕ ಹಾಗೂ ಅವಳ ಗಂಡ ಪದ್ದಣ್ಣ ಇದ್ದಾರಲ್ಲಾ, ಅವರ ಮನೆ ಸಮಾಚಾರ, ಓದಿ ನೋಡಿ.

ಒಮ್ಮೆ ನಮ್ಮ ಪದ್ದಕ್ಕ ಸಂಜೆ ದೇವರ ದೀಪ ಹಚ್ಚಿ ನಮಸ್ಕರಿಸಿ ನಂತರ ರಾತ್ರಿ ಊಟಕ್ಕಾಗಿ ಅನ್ನಕ್ಕೆ ಇಟ್ಲು, ಅದೂ ಕುಕ್ಕರ್‌ನಲ್ಲಿ ಅಲ್ಲಾ, ಪಾತ್ರೇಲಿ ಮಾಮೂಲಿ ಅನ್ನ ಇಂಗಲು ಬಿಟ್ಟು, ಉರಿ ಸಣ್ಣ ಮಾಡುವುದೂ ಮರೆತಳು. ಚಿಕ್ಕಿನ ಕಾಟ, ಅಡುಗೆ ಮನೆ ಬಾಗಿಲು ಮುಂದೆಕ್ಕೆ ಹಾಕಿಕೊಂಡು, ಹೊರಬಾಗದ ಜಗಲಿಯಲ್ಲಿ ಆರಾಮವಾಗಿ ಕುಳಿತಳು. ಸಂಜೆಯಾದ್ದರಿಂದ ದೇವರ ನಾಮಗಳ ಪಠನ ಪ್ರಾರಂಭವಾಯ್ತು. ಸುಮಾರು ಹೊತ್ತಾದ ಮೇಲೆ ಸೀದ ವಾಸನೆ ಮೂಗಿಗೆ ಬಡಿಯಿತು. ''ಏನು ಜನವೋ ಏನು, ಅಷ್ಟೂ ನಿಗಾ ಇಲ್ಲಾ'' ಎನ್ನುತ್ತಾ ಎದ್ದ ಪದ್ದಕ್ಕಾ ಅಕ್ಕಾ ಪಕ್ಕದವರ ಮನೆಗಳಿಗೆಲ್ಲಾ ಬೇಟಿ ಕೊಟ್ಟು, ಏನೋ ಸೀದ ವಾಸನೆ! ನೋಡಿಕೊಳ್ಳಿ!! ಎನ್ನುತ್ತಾ ಎಲ್ಲರನ್ನೂ ಎಚ್ಚರಿಸಿ ಮನೆಗೆ ಬಂದರು... ತನ್ನ ಮನೆ ಅನ್ನವೇ ಸೀದಿತ್ತು. ಪಾತ್ರೆಯೆಲ್ಲಾ ಕರಕಲಾಗಿ ಬಿದ್ದದ್ದು ಕಂಡ ಪದ್ದಣ್ಣ, ಅಯ್ಯೋ! ಆ ಪಾತ್ರೆ, ನೋಡು, ನಾಯಿಗೆ ಅಂಬಲೀ ಇಡುಕ್ಕೂ ಬರುಲ್ವಲ್ಲಾ ಅಂತಾ ಗೋಳಾಡಿದ.

ಇನ್ನೊಂದು ದಿನ, ಅದೇ ನಮ್ಮ ಪದ್ದಕ್ಕ, ವಠಾರದವರನ್ನೆಲ್ಲಾ ಕರೆದು, ಕೀರು ಮಾಡಿ, ಹಂಚುವುದಾಗಿ ಆಶ್ವಾಸನೆ ನೀಡಿದ್ದಳು. ಸುಮಾರು 3 ಲೀಟರ್ ಹಾಲು ಕಾಯಲು, ಗ್ಯಾಸ್ ಮೇಲೆ ಬಹಳ ಸಣ್ಣ ಉರಿಯಲ್ಲಿಟ್ಟಿದ್ದಳು. ಸ್ನೇಹಿತೆಯ ಮನೆಯಲ್ಲಿ ಗಣಪತಿ ಹೋಮ, ಗೆಳತಿಯರೆಲ್ಲಾ ಒಟ್ಟಾಗಿ ಹೋಗಿ ಬರುವುದೆಂದು ತೀರ್ಮಾನಿಸಿ, ಪದ್ದಕ್ಕನನ್ನೂ ಕೂಗಿದರು. ಸರಿ, ನಮ್ಮ ಪದ್ದಕ್ಕ ಗಂಡನಿಗೆ ಆದೇಶವಿತ್ತಳು, ''ರೀ... ನಾನು ಸಂಕ್ರಮ್ಮನ ಮನೆ ಪೂಜೆಗೆ ಹೋಗಿರ್ತೀನಿ'' ನೀವೂ ಬನ್ನಿ ಆಮೇಲೆ. ಒಲೆಯ ಮೇಲೆ ಹಾಲಿಟ್ಟಿದ್ದೇನೆ, ಮರೀಬ್ಯಾಡಿ ಎಂದು ಹೇಳಿ ಹೊರಟಳು.

ಸದ್ಯ! ಪ್ರತಿ ನಿಮಿಷಕ್ಕೂ, ಅವರ ಮನೆಲಿ ಹಾಗೆ, ಇವರ ಮನೆಲಿ ಹಾಗೇಂತ ನನ್ನನ್ನ ಕೂರಕ್ಕೂ ಬಿಡದೆ ವಟವಟಾಂತ ಏನಾದರೂ ಹೇಳ್ತಾನೆ ಇರ್ತಿದ್ಲು, ಈಗ ಸದ್ಯಕ್ಕೆ ನಾನು ಆರಾಮ್ ಅಂತಾ, ಸೋಫಾದ ಮೇಲೆ ಹಾಗೆ ಮೈಚಾಚಿದ, ನಿದ್ರಾದೇವಿ ಆವರಿಸಿದಳು. ಒಲೆಯ ಮೇಲಿದ್ದ ಹಾಲೆಲ್ಲಾ ಇಂಗೀ ಇಂಗೀ ಪಾತ್ರೆ

ಪತ್ತಿ ಸೀದು ಹೊಗೆ ತುಂಬಿತ್ತು ಮನೆ ತುಂಬಾ, ಉಸಿರು ಕಟ್ಟಕ್ಕೆ ಬಂದಿದ್ದರೂ ಪದ್ದಣ್ಣನಿಗೆ ಎಚ್ಚರವಿಲ್ಲಾ!!

ಇತ್ತ ಪದ್ದಕ್ಕ, ಗೆಳತಿಯರೆಲ್ಲಾ ಸಂಸಾರ ಸಮೇತ ಬಂದಿದ್ದಾರೆ, ನನ್ನ ಪದ್ದಣ್ಣ ಬರಲೇ ಇಲ್ವಲಾಂತ ಪೂಜೆ, ಹೋಮದ ಮಧ್ಯದಲ್ಲೆ ಎದ್ದು ಮನೆಗೆ ಬಂದಳು. ಕರೆ ಗಂಟೆಯನ್ನ ಒತ್ತಿ ಒತ್ತಿ ಸಾಕಾಗಿ, ಕಿಟಕಿಯ ಮೂಲಕ ಬಗ್ಗಿ ನೋಡಿದರು!! ಹೋಮ ಮಾಡುತ್ತಿರುವುದು ಅಲ್ಲಿಯೋ? ಇಲ್ಲೋ? ಎಂದು ಅನುಮಾನ ಕಾಡಿತು, ಗಂಡನನ್ನು ಕೂಗಿ ಕೂಗಿ ಸಾಕಾಗಿ, ಕೊನೆಗೆ ಅಕ್ಕ ಪಕ್ಕದವರ ಸಹಾಯ ಪಡೆದು, ದೊಡ್ಡ ಗಳು ತಂದು, ಸೋಪಾದ ಮೇಲೆ ಆಸೀನನಾಗಿದ್ದ ಪದ್ದಣ್ಣನನ್ನ ತಿವಿಯಲಾರಂಬಿಸಿದರು. ಆಗ ಪದ್ದಣ್ಣ ಗಾಬರಿಯಿಂದ! ಯಾರು? ಏನಿದು? ಎನ್ನಲು ಪದ್ದಕ್ಕ ಹೇಳಿದಳು, ಗಾಬರಿ ಬೇಡ ನನ್ನ ದೊರೆ, ಬಾಗಿಲು ತೆಗೆ ನೋಡೋಣ ಏನಾಗಿದೆ ಎನ್ನಲು, ಪದ್ದಣ್ಣ ನಿಧಾನವಾಗಿ ಎದ್ದು, ಬಾಗಿಲು ತೆಗೆದ, ಅವಸರದಲ್ಲಿ ಒಳನುಗ್ಗಿದ ಪದ್ದಕ್ಕ ಸೀದಾ ಅಡುಗೆ ಮನೆಗೆ ಓಡಿದಳು, ಕೀರು ಮಾಡಲು ತಂದಿದ್ದ ಹಾಲೆಲ್ಲಾ ಬತ್ತಿ ಕರುಕಲಾಗಿ ವಿಘ್ನೇಶ್ವರನಿಗೆ ಆಹುತಿಯಾಗಿತ್ತು. ಹೀಗೆ ಒಮ್ಮೆ ಒಬ್ಬರದಾದರೆ ಮತ್ತೊಮ್ಮೆ ಮತ್ತೊಬ್ಬರು, ಮರವಿನಲ್ಲಿ ಎತ್ತಿದ ಕೈ ಆಗಿದ್ದರು. ಮೊನ್ನೆ ಮೊನ್ನೆ ತಾನೆ ನಮ್ಮ ಪದ್ದಣ್ಣ ಏನ್ಮಾಡಿದ್ದ ಗೊತ್ತಾ? ಬಿಡಿ, ಅದು ನಿಮಗೆ ಹೇಗೆ ಗೊತ್ತಾಗುಕ್ಕೆ ಸಾಧ್ಯ, ನಾನೇ ತಿಳಿಸಿಬಿಡ್ತೀನಿ.

ನಮ್ಮ ಪದ್ದಕ್ಕಂಗೆ ಮಾರುದ್ದ ಮಂಡೆ, ತಲೆ ತುಂಬಾ ಹರಳೆಣ್ಣೆ ಹಚ್ಚಿಕ್ಕೊಂಡಿದ್ಳು, ನೋಡ್ರಿ, ನಾನು ತಲೆಗೆ ಸ್ನಾನ ಮಾಡಬೇಕು. ಹಾಲು ಬಂದಾಯ್ತು, ನೀರು ಬಂದಾಯ್ತು, ಕೆಲಸದ ನಿಂಗಿಯೂ ಬಂದು ಹೋದ್ಳು, ಇನ್ನು ಯಾವ ಅವಾಂತರವೂ ಇಲ್ಲಾ, ನೀವು ಆಚೆ ಹೋಗುವವರಿದ್ದರೆ ಬೀಗ ಹಾಕಿಕೊಂಡು ''ಕೀ ತಗೊಂಡು ಹೋಗಿ'' ಎಂದಳು.

ಪದ್ದಣ್ಣ ಯೋಚಿಸಿದ, ಅದೂ ಸರಿಯೇ, ಪಾಪ! ನಿಧಾನವಾಗಿ ಎರಕೊಂಡು ಬರಲೀಂತಾ ಮನೆಗೆ ಬೀಗ ಹಾಕಿಕೊಂಡು, ಸಾಮಾನಿಗಾಗಿ ಕೈಚೀಲ ಹಿಡಿದು ಹೊರಟ.

ಸುಮಾರು ಹತ್ತೆ ನಿಮಿಷದೊಳಗೆ, ಎಲ್ಲಾ ಸಾಮಾನುಗಳನ್ನು ತೆಗೆದುಕೊಂಡು ಬಂದ ಪದ್ದಣ್ಣ ಮಾಮೂಲಿನಂತೆ ಕರಗಂಟೆ ಒತ್ತಿಬಿಟ್ಟಾ! ಸುಮಾರು, 4 ಸಲ ಒತ್ತಿ ಒತ್ತಿ ಸಾಕಾಗಿ ಬಾಗಿಲು ಬಡಿಯಲು ಪ್ರಾರಂಭಿಸಿದ, ಆಗಲೂ ಪದ್ದಕ್ಕನ ಸುಳಿವಿಲ್ಲಾ, ಅಯ್ಯೋ! ಕರಂಟ್ ಹೋಗಯ್ತೇನೋ ಅಂದವನೇ ಹಾಗೆ ಕಂಬಕ್ಕೆ ಒರಗಿ ನಿದ್ರಿಸಿದ ಜಗಲಿ ಮೇಲೆ.


ಇತ್ತ ಪದ್ದಕ್ಕ, ತಲೆ ತುಂಬಾ ಸೀಗೆಕಾಯಿ ಮೆತ್ತಿಕೊಂಡಿದ್ದಳು. ಬೇಗ, ಬೇಗ ಮುಗಿಸಿ ಬರಲು ಸಾಧ್ಯವೆ? ಅಯ್ಯ! ಯಾರು ಬಂದಿರಬಹುದು? ಇಲ್ಲೆ ಹತ್ತಿರದಿಂದ ಬಂದವರಾದರೆ ಮತ್ತೆ ಬರುತ್ತಾರೆ, ಅಪರೂಪಕ್ಕೆ ಬಂದವರಾದರೆ? ಎಂದು ರಪರಪಾಂತ ತಲೆ ಉಜ್ಜಿಕೊಂಡು, ಬೇಗ ಬೇಗ ಸ್ನಾನ ಮುಗಿಸಿ, ಮಡಿ ಬಟ್ಟೆ ಧರಿಸಿ, ಮುಖ ಕೆಂಪಗೆ ಮಾಡಿಕೊಂಡು ಬಂದು, ಬಾಗಿಲ ಕಿಂಡಿಯಿಂದಾ ನೋಡಿದರೆ!! ಪದ್ದಣ್ಣಾ ನಿದ್ರಿಸುತ್ತಿರುವುದೆ?

ದಡಾರಂತ ಬಾಗಿಲು ತೆಗೆದವಳೇ ಒಂದು ಲೋಟ ತಣ್ಣೀರನ್ನ ತಂದು ಪದ್ದಣ್ಣನ ಮುಖಕ್ಕೆ ಎರಚಿದಳು.

ಪದ್ದಣ್ಣ ಗಾಬರಿಯಲ್ಲಿ ಎದ್ದು ಕುಳಿತು, ಏನ್ ಮಾಡ್ಲೆ ಬೆಲ್ ಒತ್ತಿ ಒತ್ತಿ ಸಾಕಾಯ್ತು, ಬಾಗಿಲು, ಬಡಿದೆ, ಹಾಗಾದರೂ ನೀನು ಬಾಗಿಲು ತೆಗಿಲಿಲ್ಲಾ, ಹಾಗೆ ಒರಗಿ ಕೂತೆ, ಒಂದು ಸಣ್ಣ ಜೋಂಪು ಹತ್ತಿತ್ತು ಅಷ್ಟೇ!!

ಅಯ್ಯೋ! ನಿಮ್ಮ ಮರವಿಗಷ್ಟು, ನಾನೇಕ್ರಿ ಬಾಗಿಲ ತೆಗಿಬೇಕಿತ್ತು? ನಿಮ್ಮ ಹತ್ತಾನೆ ಕೀ ಇರ್ಲಿಲ್ವಾ?

ಓಹೋ!! ಹೌದಲ್ವಾ, ಈ ಹಾಳಾದ್ದು ಮರವು, ನನ್ನ ಈ ಮರವಿನಿಂದಾಗಿ, ಚಿನ್ನಾ ನಿನಗೆ ಅವಾಂತರವಾಯ್ತೇ? ಎನ್ನುತ್ತಾ ಹೆಂಡತಿಯತ್ತ ಮರುಕದ ನೋಟ ಬೀರಿದ ಪದ್ದಣ್ಣ.



ಬೇಟೆ

– ಶಂ.ಭಂ. ಕೃಷ್ಣಮೂರ್ತಿ

ಚುಮು ಚುಮು ಚಳಿಯಲ್ಲಿ ಗಡಗಡ ನಡುಗುತ್ತಾ ನಗರದ ರಿಂಗ್ ರೋಡಿನಲ್ಲಿ ಟ್ರಾಫಿಕ್ ಪೇದೆ ಮುನ್ಸಾಮಿ ಬೇಟೆಯಾಡಲು ನಿಂತಿದ್ದ. ಮಂತ್ ಎಂಡಾಗುತ್ತಿದ್ದರೂ ಅವನು ಒಂದು ಕೇಸನ್ನೂ ಬಲೆಗೆ ಹಾಕಿಕೊಳ್ಳದೆಯಿದ್ದುದರಿಂದ ಎಸ್.ಐ. ರುದ್ರಮುನಿಯವರು ಅವನಿಗೆ ಉಗಿದು ಉಪ್ಪು ಹಾಕಿದ್ದರು.

ನೈಟು ಪನ್ನೆರಡರಿಂದ ಮುಂಜಾನೇ ಮೂರು ಘಂಟೆಯವರೆಗೆ ಕಾದರೂ, ಎರಡು ಕಟ್ಟು ಬೀಡಿ ಸುಟ್ಟು ಭಸ್ಮವಾಯಿತೇ ವಿನಃ, ಒಂದು ಲಾರಿಯೂ ಅವನ ಕಣ್ಣು ಮುಂದೆ ಹಾದು ಹೋಗಿರಲಿಲ್ಲ. ನಿರಾಸೆಯ ತುಟ್ಟ ತುದಿಯನ್ನು ಅವನು ಮುಟ್ಟಿದಾಗಲೇ, ಮಂಜು ಮುಸುಕಿದ್ದ ರಿಂಗ್ ರೋಡಿನಲ್ಲಿ ಮಣ್ಣು ತುಂಬಿಕೊಂಡಿದ್ದ ಲಾರಿಯೊಂದು ಹೆಡ್‌ಲೈಟಿನ ಮೂಕು ಬೆಳಕನ್ನು ರಸ್ತೆಯ ಮೇಲೆ ಚೆಲ್ಲಿ ಭುಸಗುಟ್ಟುತ್ತಾ ಬರುತ್ತಿದ್ದುದು ಕಂಡು ಅವನ ಮನಸ್ಸಿಗೆ ಕೊಂಚ ಸಮಾಧಾನವಾಯಿತು.

''ಇಳೀರೋ ಕೆಳಕ್ಕೆ ಬದ್ಮಾಸುಗಳ'' ಎಂದು ಪೋಲೀಸ್ ಭಾಷೆಯಲ್ಲಿ ಕೂಗಿದ ಮುನ್ಸಾಮಿ. ಡ್ರೈವರು, ಕ್ಲೀನರು ಕೆಳಗಿಳಿದು ಕೈಕಟ್ಟಿ ಅವನ ಮುಂದೆ ನಿಂತ ಮೇಲೆ ''ವಯಸ್ಸು ಎಷ್ಟಾಗೈತೆ'' ಎಂದು ಕೇಳಿದ. ''ನಂಗೆ ಮೂವತ್ತಾಗ್ತೈತ್ರಿ. ಇವ ಇನ್ನೂ ಇಪ್ಪತ್ತರಾಗೇ ಅವ್ನೆ'' ಎಂದು ಲಾರಿಯ ಚಾಲಕ ವೀರಭದ್ರು ಹೇಳಿದ.

''ನಿನ್ನ ವಯಸ್ನಲ್ಲೋ ನಾ ಕೇಳಿದ್ದು. ಲಾರಿ ವಯಸ್ಸು ಎಷ್ಟಾಗೈತೆ ಅದ್ನ ಬೊಗ್ಳು'' ಎಂದು ರೇಗಿದ ಮುನ್ಸಾಮಿ.

''ಅದಿಮೂರು ತುಂಬಿ, ಅದಿನಾಲ್ಕು ನಡಿತೈತ್ರಿ'' ಎಂದು ವೀರಭದ್ರು ತಡವರಿಸುತ್ತಾ ಹೇಳಿದ. ಲಾರಿಯ ಡೇಟ್ ಆಫ್ ಬರ್ತ್ ಅವನಿಗೆ ಹೇಗೆ ತಿಳೀಬೇಕು? ಅವನೇನು ಅದರ ಬರ್ತ್‌ಡೇನ ಆಚರಿಸುತ್ತಿದ್ದನೆ. ಹದಿನೈದು ವರ್ಷ ಮೇಲ್ಪಟ್ಟ ವಾಹನಗಳನ್ನ ನಗರದೊಳಗೆ ಬಿಡುವುದಿಲ್ಲವೆಂಬುದನ್ನು ಅವನು ಪೇಪರ್ ಓದಿ ತಿಳಿದುಕೊಂಡಿದ್ದ. ಅದಕ್ಕೆ ಲಾರಿಗೆ ಒಂದು ವರ್ಷ ವಯಸ್ಸು ಕಡಿಮೆ ಮಾಡಿ ಹೇಳಿದ್ದ.

''ಎಲ್ಲಿಂದ ಬತ್ತಿದ್ರಿ?'' ಮುನ್ಸಾಮಿ ಅದೇ ಜೂರತ್ತಿನಲ್ಲೇ ಕೇಳಿದ.

''ಐವತ್ತು ಕಿಲೋ ಮೀಟರ್ ದೂರ್ದಾಗಿರೋ ಕಾಗಿ ಅಳ್ಳಿಯಿಂದ ಮಣ್ಣು ತುಂಬ್ಕೊಂಡಿ ಬರ್ತಿದೀವಿ ಸಾರ್...'' ಎಂದು ಡ್ರೈವರ್ರೇ ಹೇಳಿದ.

''ಐವತ್ತು ಕಿಲೋಮೀಟರಿಂದಾನೂ ನೀವು ಒಗೆ ಬುಟ್ಕೊಂಡು ಪರಿಸರ ಮಾಲಿನ್ಯ ಮಾಡ್ಕಂಡೇ ಬಂದೀರಿ ಅಂತಾತು...'' ಎಂದು ಪೇದೆ ಮುನ್ಸಾಮಿ ಹೇಳಿದಾಗ ವೀರಭದ್ರು ಹೌಹಾರಿದ.

''ಇಲ್ರಿ ಸಾರ್ ಈ ಗಾಡಿ ಒಗೇನೇ ಬುಡೋದಿಲ್ರಿ. ಇದು ಡೀಸೆಲ್ ಗಾಡಿ ಬುದ್ದಿ'' ಎಂದು ವೀರಭದ್ರು ಮತ್ತೊಂದು ಸುಳ್ಳು ಹೇಳಿದ. ಮುನ್ಸಾಮಿಗೆ ಈಗ ಯೋಚನೆಗಿಟ್ಟುಕೊಂಡಿತು. ಪೆಟ್ರೋಲ್ ಗಾಡಿ ಹೊಗೆ ಕಾರುತ್ತೆ ಅನ್ನೋದು ಅವನಿಗೆ ಖಾತ್ರಿಯಾಗಿ ತಿಳಿದಿತ್ತು. ಆದ್ರೆ ಡೀಸೆಲ್ ಗಾಡಿ ಹೊಗೆ ಕಾರುತ್ತದೆಯೇ ಇಲ್ಲವೇ ಅನ್ನುವುದು ಅವನಿಗೆ ನಿಖರವಾಗಿ ಗೊತ್ತಿಲ್ಲದೇಯಿದ್ದುದರಿಂದ ವೀರಭದ್ರುವಿನ ಮಾತನ್ನು ಅವನು ನಂಬಿದ.

ಲಾರಿಗೆ ಸುಣ್ಣ ಬಣ್ಣ ಮಾಡಿಸಿದ್ದರಿಂದ ಬ್ರ್ಯಾಂಡ್ ನ್ಯೂ ಗಾಡಿಯ ಹಾಗೆಯೇ ಕಾಣುತ್ತಿತ್ತು. ಹೊಗೆ ಕಾರಿಲ್ಲದೆಯಿರೋದ್ರಿಂದ ಪರಿಸರ ಮಾಲಿನ್ಯದ ನೆಪ ಇಟ್ಕೊಂಡು ಕೇಸು ಬುಕ್ ಮಾಡೋ ಹಾಗೂ ಇಲ್ಲ. ಇನ್ನು ಯಾವ ರೀತಿಯ ಕಾನೂನು ಭಂಗಕ್ಕೆ ಈ ಗಾಡಿಯನ್ನು ಹಿಡಿಯೋದೆಂಬುದು ತಿಳಿಯದೆ ಮುನ್ಸಾಮಿ ಚಿಂತಿತನಾದ.

''ಸಬ್ದ ಮಾಲಿನ್ಯ ಅಂತೂ ಆಗೈತಿ ಐವತ್ತು ಕಿಲೋ ಮೀಟರ್ ದೂರ್ದಾಗಿಂದ ಆರನ್ ಒಡ್ಡೂ ಒಡ್ಡೂ ಸಬ್ದ ಮಾಲಿನ್ಯ ಮಾಡೇ ಇರ್ತೀರಿ. ಟೇಸನ್ಗೆ ನಡೀರಿ. ಆಮ್ಯಾಕೆ ಎಂಗೆ ಕೇಸು ಆಕ್ಬೇಕೂಂತ ಯೋಚ್ನೆ ಮಾಡೋವ'' ಎಂದು ಮುನ್ಸಾಮಿ ಪಟ್ಟು ಹಿಡಿದ ಅವನಿಗೆ, ಈ ಲಾರಿಯ ಮೇಲೆ ಒಂದಾದರೂ ಕೇಸು ಹಾಕಿ, ಮನ್‌ಥ್ಲಿ ಕೋಟಾನ ಸ್ವಲ್ಪವಾದರೂ ಪೂರೈಸೋಣ ಅಂಬೋ ಬಯಕೆ.

''ಅಯ್ಯಯ್ಯೋ ಸಬ್ದ ಮಾಲಿನ್ಯ ಎಂಗಾಯ್ತದೆ ಸಾರ್. ಗಾಡೀಗೆ ಆರನ್ನೇ ಮಡಗಿಲ್ವಲ್ಲಾ ಸಾರ್ ನಾವು....'' ಎಂದು ವೀರಭದ್ರು ಹೇಳಿದಾಗ ಮುನ್ಸಾಮಿಯ ಮುಖ ಬಾಡಿತು. ''ಹಳೇ ಗಾಡಿಯಾದ್ರೂ, ಹೊಗೆ ಬಿಟ್ಟು ಪರಿಸರ ಮಾಲಿನ್ಯ ಮಾಡಿಲ್ಲ. ಹಾರನ್ ಹೊಡ್ದು, ಗಡ ಗಡ ಶಬ್ದ ಮಾಡಿ ಶಬ್ದ ಮಾಲಿನ್ಯ ಮಾಡಿಲ್ಲ. ಹೀಗಿರುವಾಗ ಗಾಡಿಗೆ ಹದಿನೈದು ವರ್ಷವಾದರೇನು, ಇಪ್ಪತ್ತು ವರ್ಷವಾದರೇನು. ಇಂಥಹ ಲಾರಿಗಳ್ನ ನಗರದೊಳಗೆ ಬಿಟ್ಟರೆ ತಪ್ಪೇನು?'' ಎಂದು ಚಿಂತಿಸುತ್ತಾ ಮುನ್ಸಾಮಿ ನಿಂತುಕೊಂಡಾಗ, ವೀರಭದ್ರು ಲಾರಿಯನ್ನು ಡ್ರೈವ್ ಮಾಡಿಕೊಂಡು ಕಣ್ಮರೆಯಾಗಿದ್ದ.

★★★

... ಎಷ್ಟು "ಮೇಲಿ" ಬರೆದದ್ದು...

– ಹೆಚ್. ಗೋಪಾಲಕೃಷ್ಣ

ಮೊದಲ ಪ್ರೇಮ ಪ್ರಸಂಗ, ಕುಟ್ಟಿ ಬಜಾಯಿಸಿದ ಮೊದಲ ಭಾಷಣ. ಪ್ರಕಟಗೊಂಡ ಮೊಟ್ಟ ಮೊದಲ ಲೇಖನ, ಹುಟ್ಟಿದೂರು ದಾಟಿ ಗಗನಕ್ಕೆ ಹಾರಿದ ಮೊದಲ ಪ್ರಯಾಣ ಪ್ರಸಂಗ ಹೀಗೆ ಹಲವಾರು ಮೊದಲಿನ ಪ್ರಸಂಗಗಳು ಮನುಷ್ಯನ ಮೆದುಳಿನಲ್ಲಿ ಖಾಯಂ ಆಶ್ರಯ ಪಡೆದಿರುತ್ತವೆಯಂತೆ. ಇಂತಹ ಮೊದಲುಗಳಿಗೆ ಸಾವೇ ಇಲ್ಲವಂತೆ. ಸಂಬಂಧಿಸಿದ ವ್ಯಕ್ತಿಗೆ ಆಗಾಗ್ಗೆ ಸಂತೋಷ ನಲಿವು ಒದಗಿಸುವ ಈ ಸಂದರ್ಭಗಳೇ ನೆನಪು ಕಹಿಯಲ್ಲ ಎಂಬ ಆಡುಮಾತಿಗೆ ಪ್ರೇರಣೆ ಎಂದು ತಿಳಿದವರು ಲಾಗಾಯ್ತಿನಿಂದಲೂ ಹೇಳುತ್ತಲೇ ಬಂದಿದ್ದಾರೆ. memoirs are sweet ಎಂಬ ಮಾತೂ ಸಹ ಈ ಅನುಭವಗಳಿಂದಲೇ ಪ್ರೇರಿತವಾಗಿದೆ.

ಈ ತನಕ ಪ್ರಕಟನೆ ಆಗಿರದ, ನೀವು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಬರೆದ ಒಂದು ಪುಟ್ಟ ಪ್ರಬಂಧ ನಿಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ನಿಂತಿದೆಯೇ? ಇಂತಹ ಪ್ರಶ್ನೆಗೆ 'ಇಲ್ಲ ಬಿಲ್‌ಕುಲ್ ಇಲ್ಲ' ಎಂದು ನೀವು ಉತ್ತರಿಸುತ್ತೀರಿ ಎಂದು ನನಗೆ ಗೊತ್ತು. ಇಂತಹ ಸಂಗತಿಗಳು ಯಾರ ಮೆದುಳಿನಲ್ಲೂ ನಿಂತಿರುವುದಿಲ್ಲ ಎಂದೂ ನನಗೆ ಅರಿವು ಇದೆ. ಆದರೆ ನಾನು ನನ್ನ ಆ ಕಾಲದಲ್ಲಿ ಶಾಲೆಯಲ್ಲಿ ಬರೆದ ಒಂದು ಪುಟ್ಟ ಲೇಖನ ಅಥವಾ ಮೊದಲ ಬರಹ ಈಗಲೂ ನನ್ನ ತಲೆಯಲ್ಲಿ ಗುಂಯ್‌ಗುಡುತ್ತದೆ ಮತ್ತು ಹಲವಾರು ಸಾರಿ ರಾತ್ರಿಯ ನಿದ್ರೆಯಲ್ಲೂ ಸಹ ಈ ಲೇಖನ ತಟಕ್ಕನೆ ಮೆದುಳಿನ ಮೇಲುಸ್ತರಕ್ಕೆ ಧಾವಿಸಿ ನನ್ನ ನಿದ್ರೆ ಕೆಡಿಸಿದೆ, ಕೆಡಿಸುತ್ತಿದೆ ಮತ್ತು ಮುಂದೆಯೂ ಸಹ ಕೆಡಿಸುತ್ತದೆ ಎಂಬ ಹೆದರಿಕೆ ನನಗಿದೆ. ಸದರಿ ಲೇಖನದ ಹಿನ್ನೆಲೆಗೆ ತಮ್ಮನ್ನು ಕರೆದುಕೊಂಡು ಹೋಗಲೇ...

ತುಮಕೂರಿನ ಉಪ್ಪಾರಳ್ಳಿ ಗೇಟಿನ ಹತ್ತಿರದ ಒಂದು ವಠಾರದಲ್ಲಿ ಆಗ ನಮ್ಮ ವಾಸ. ವಠಾರವಾಗಿದ್ದರಿಂದ ಅದಕ್ಕೆ ಹೊರಗಡೆಗೆ ಭದ್ರವಾದ ಬಾಗಿಲುಗಳಾಗಲೀ, ಹಿಂಭಾಗಕ್ಕೆ ಹಿತ್ತಲು ಗಿತ್ತಲುಗಳಾಗಲೀ ಇರಲಿಲ್ಲ. ಎಡಗಡೆಗೆ ನಾಲ್ಕು ಸಾಲು ಮನೆಗಳು, ಅದಕ್ಕೆ ಎದುರಾಗಿ ಬಲಭಾಗಕ್ಕೆ ನಾಲ್ಕು ಸಾಲು ಮನೆಗಳು - ಇದರ ಮಧ್ಯದ ಹಾದಿ ನಮಗೆ ಮನೆ ಅಂಗಳದ ಹಾಗೆ. ಆ ಕಾಲದಲ್ಲಿ ವಾಸ್ತು ಶಿಲ್ಪಿಗಳು ಇನ್ನೂ ಹುಟ್ಟಿರಲಿಲ್ಲವಾದ್ದರಿಂದ ಮನೆ ಹೀಗೆಯೇ ಇರಬೇಕು ಎಂಬುವ ಲಿಖಿತ ಅಥವಾ ಅಲಿಖಿತ ನಿಯಮಗಳು ಜಾರಿಯಲ್ಲಿರಲಿಲ್ಲ. ವಾಸಕ್ಕೆ ಒಂದು ಗೂಡು ಅದೇ ಆಗಿನ ವಾಸ್ತವತೆ. ಇಂತಹ ವಠಾರದಲ್ಲಿ ಬಲಭಾಗದ ಮೊದಲಿನಲ್ಲೇ ನಮ್ಮ

ಮನೆ. ಹೆಂಚು ಹೊದಿಸಿದ್ದ ಮನೆಯಾದ್ದರಿಂದ ಅದಕ್ಕೆ ಮಹಡಿ ಪಹಡಿ ಸೌಕರ್ಯ ಇರಲಿಲ್ಲ. ಮಡಿಬಟ್ಟೆಗಳನ್ನು ಹರವುವುದು ಮನೆಯ ಮುಂದೆ ಕಟ್ಟಿದ ಹಗ್ಗದ ಮೇಲೆ; ಹಪ್ಪಳ ಸಂಡಿಗೆ ಒಣಗಿಸುವುದು ಮನೆಯ ಮುಂದಿನ ಜಾಗದಲ್ಲಿ - ಅಂದರೆ ಅಂಗಳದಲ್ಲಿ. ನಾನು ಆಗತಾನೇ ಮೂರನೇ ಕ್ಲಾಸು ಮುಗಿಸಿದ್ದೆ. ಬೇಸಿಗೆ ರಜಾ ಬಂದಿತ್ತು. ಬೇಸಿಗೆ ಎಂದರೆ ಮನೆಯಲ್ಲಿನ ಅಮ್ಮ ಅಜ್ಜಿ ಅವರಿಗೆ ಹಪ್ಪಳ ಸಂಡಿಗೆಯ ಕಾರ್ಖಾನೆ ನಡೆಸುವ ಉತ್ಸಾಹ.

ಇಂತಹ ಒಂದು ಬೇಸಿಗೆಯ ದಿವಸ ಮನೆ ಮುಂದೆ ಸಂಡಿಗೆ ಇಟ್ಟು ಅದನ್ನು ಕಾವಲು ಕಾಯಲು ನನ್ನನ್ನು ಕೂಡಿಸಿ ಅಮ್ಮ ಅಜ್ಜಿ ಒಳ ಸೇರಿದ್ದರು. ದೂರದಲ್ಲಿ ಹಾರಾಡುತ್ತಿದ್ದ ಕಾಗೆ ಗುಬ್ಬಚ್ಚಿಗಳನ್ನು ಹಾಹಾ ಎಂದು ಧ್ವನಿ ಹೊರಡಿಸಿ ಕೈಬೀಸಿ ದೂರ ಓಡಿಸುತ್ತಾ ಸಂತೋಷದಿಂದ ಕರ್ತವ್ಯ ನಿರ್ವಹಿಸುತ್ತಿದ್ದೆ. ನಮ್ಮ ಎದುರು ಸಾಲಿನ ಮೊದಲ ಮನೆಯಲ್ಲಿ ಸಂಗೀತ ವಿದ್ವಾಂಸರೊಬ್ಬರಿದ್ದರು. ಅವರ ಮಗಳು ನನಗೆ ಅಕ್ಕನ ಹಾಗೆ - ಎಂಟು ಹತ್ತು ವರ್ಷ ದೊಡ್ಡವಳು. ಅವಳ ಸಂಗಡ ಹಳಗುಳಿ ಮನೆ, ಹುಲಿಕುರಿ ಆಟ, ಚೌಕಾಭಾರ - ಕುಂಟೇಬಿಲ್ಲೆ ಆಡಲು ನಾನು ಸದಾ ಸಿದ್ಧ. ಅವಳು ನನ್ನ ಹೆಸರು ಹಿಡಿದು ಕೂಗಿದ ಕೂಡಲೇ ಛಂಗ್ ಅಂತ ನೆಗೆದು ಅವಳ ಮನೆ ಸೇರಿದೆ. ಅವಳ ಸಂಗಡ ಹಳಗುಳಿ ಆಡಿ ಆಯಿತು. ಅದರ ನಂತರ ಚೌಕಾಭಾರ ಅದೆಷ್ಟು ಹೊತ್ತು ಆಟ ನಡೆದಿತ್ತೋ ಅಜ್ಜಿ ಅಮ್ಮರ ಗಟ್ಟಿ ಮಾತು, ಜೋರು ಧ್ವನಿ 'ಎಲ್ಲಿಗೆ ಹಾಳಾಗಿ ಹೋದ ಇವನು...' ಎಂಬ ಬೈಗುಳ ಸಹ ಕೇಳಿಸಿತು. ಎದ್ದು ಆಚೆ ಬಂದೆ.

ಎರಡು ಪಂಚೆ ಹರಡಿ ಅದರ ತುಂಬಾ ಹಾಕಿದ್ದ ಸಂಡಿಗೆ ಖಾಲಿ ಖಾಲಿ ಆಗಿದೆ. ವಠಾರದ ಪ್ರವೇಶದಲ್ಲಿ ಒಂದು ಎಮ್ಮೆ ಸಾವಕಾಶವಾಗಿ ನಿರ್ಗಮಿಸುತ್ತಿದೆ. ಅದಕ್ಕೆ ದೂರದಿಂದ ಅಮ್ಮ ಅಜ್ಜಿ ಕೈಯಲ್ಲಿನ ಚೆಂಬಿನಿಂದ ನೀರು ಎರಚುತ್ತಿದ್ದಾರೆ! 'ಹಾಕಿದ್ದ ಸಂಡಿಗೆಯೆಲ್ಲಾ ಹಾಳಾದ್ದು ಎಮ್ಮೆ ತಿಂದುಕೊಂಡು ಹೋಯಿತಲ್ಲೋ? ಇಲ್ಲೇ ಇರು ಅಂತ ಬೊಗಳಿರಲಿಲ್ಲವಾ ನಾನು?...' ಅಂತ ಅಜ್ಜಿ ನನ್ನನ್ನು ಕಂಡ ಕೂಡಲೇ ರೇಗಿತು. ಇಂತಹ ಸಂದರ್ಭದಲ್ಲಿ ಮಾತಿಗೆ ಮಾತು ಸೇರಿಸಬಾರದು ಎಂಬ ಜ್ಞಾನ ಆಗಲೇ ಸಂಪಾದಿಸಿದ್ದೆ. ಆದರಿಂದ ತೆಪ್ಪಗಿದ್ದೆ. ಅಮ್ಮ ಮಗಳು ಸುಮಾರು ಇಪ್ಪತ್ತು ನಿಮಿಷ ಬೈದು ಒಳ ಸೇರಿದರು.

ಈ ಸಂಡಿಗೆ ಪ್ರಸಂಗವಾದ ಒಂದು ವಾರಕ್ಕೆ ಅಂತ ಕಾಣುತ್ತೆ. ಅಜ್ಜಿ ಅವರ ರೇಷ್ಮೆ ಸೀರೆಯನ್ನ ಪೆಟ್ಟಿಗೆಯಿಂದ ಹೊರತೆಗೆದರು. ಬೆಳಕಿಗೆ ಹಿಡಿದರೆ ನುಸಿ ಹುಳು ಓಡಾಡುತ್ತಾ ಇದ್ದದ್ದು ಕಾಣಿಸಿತಂತೆ. ಸೀರೆ ಆಚೆ ತಂದು ಬಿಸಿಲಿಗೆ ಹರಡಿದರು. ಸ್ವಲ್ಪ ಹೊತ್ತು ಬಿಸಿಲಲ್ಲಿದ್ದರೆ ನುಸಿ ಹೋಗುತ್ತೆ ಅಂತ ಸ್ವಗತ ಮಾಡಿಕೊಂಡರು. ಅದರ

ಪಕ್ಕ ನಮ್ಮಮ್ಮ ಮಡೀ ಸೀರೆ ಹರಪಿದರು. ರೇಷ್ಮೆಗೆ ಮೈಲಿಗೆ ಇಲ್ಲವಂತೆ - ಅದರಿಂದ ಅವರ ಪಕ್ಕ ಮಡಿಸೀರೆ ಹರವಿದರೆ ಅದೂ ಸಹ ಮಡಿ ಅಂತ ನಮ್ಮಮ್ಮನ ನಂಬಿಕೆ. ಎಂದಿನ ಹಾಗೆ ಮನೆ ಮುಂದೆ ಗೋಲಿ ಆಡುತ್ತಾ ಇದ್ದ ನನಗೆ 'ಇಲ್ಲೇ ಇರೋ - ಎಲ್ಲೂ ಆಡಕ್ಕೆ ಹೋಗಬೇಡ' ಅಂತ ಹೇಳಿ ಅಜ್ಜಿ ಅಮ್ಮ ಒಳ ಸೇರಿದರು.

ಒಂದೆರಡು ನಿಮಿಷದಲ್ಲಿ ಎದುರಿನ ಸಂಗೀತ ವಿದ್ವಾಂಸರ ಮನೆಯಿಂದ ಹಾರ್ಮೋನಿಯಂ ಬಾರಿಸಿದ ಶಬ್ದ ಕೇಳಿಸಿತು. ಬೆಳಿಗ್ಗೆಯೇ ವಿದ್ವಾಂಸರು ಆಚೆ ಹೋಗಿದ್ದು ನೋಡಿದ್ದೆ. ವಿದ್ವಾಂಸರು ಮನೆಯಲ್ಲಿಲ್ಲದಾಗ ಅವರ ಮಗಳು ನನಗೆ ಹಾರ್ಮೋನಿಯಂ ನುಡಿಸಲು ಬಿಡುತ್ತಿದ್ದಳು. ಹಾರ್ಮೋನಿಯಂ ಅನ್ನು ಒತ್ತಿ ಒತ್ತಿ ಅದರಿಂದ ಬರುವ ಚಿತ್ರ ವಿಚಿತ್ರದ ನಾದದ ಸುಖ ಅನುಭವಿಸುತ್ತಿದ್ದೆ. ಕೂಡಲೇ ವಿದ್ವಾಂಸರ ಮನೆಗೆ ನುಗ್ಗಿದೆ. 'ಅಕ್ಕಾ ಜಾಗ ಬಿಡ್ತೀಯಾ?' ಅಂದೆ. ಅಕ್ಕ ಪಕ್ಕಕ್ಕೆ ಸರಿದಳು. ನಾನು ಅವಳ ಜಾಗದಲ್ಲಿ ಕೂತು ಹಾರ್ಮೋನಿಯಂನಿಂದ ಚಿತ್ರವಿಚಿತ್ರ ಶಬ್ದ ಹೊರಡಿಸುತ್ತಾ ಅದರ ಸುಖ ಅನುಭವಿಸುವುದರಲ್ಲಿ ತನ್ಮಯನಾದೆ. ಹೀಗೆ ಎಷ್ಟು ಹೊತ್ತು ಸಂಗೀತಾಭ್ಯಾಸ ನಡೆಸಿದ್ದೆನೋ ತಿಳಿಯದು. ಹೊರಗಡೆ ಜೋರುಧ್ವನಿಯಲ್ಲಿ ಅಮ್ಮ ಅಜ್ಜಿ - ಹಾರ್ಮೋನಿಯಂನ ಶಬ್ದವನ್ನೂ ಮೀರಿಸುವ ಧ್ವನಿಯಲ್ಲಿ - ಯಾರನ್ನೋ ಬೈಯುತ್ತಿರುವುದು ಕೇಳಿಸಿತು. ಅದೇನು ಅಂತ ಆಚೆ ಬಂದೆ. ಅಜ್ಜಿ ಅಮ್ಮ ಕಕ್ಕಾಬಿಕ್ಕಿಯಾಗಿ ನಿಂತಿದ್ದಾರೆ. ಒಬ್ಬರ ಕೈಯಲ್ಲಿ ತಾಮ್ರದ ಪಂಚಪಾತ್ರೆಯಲ್ಲಿ ನೀರಿದೆ, ಮತ್ತೊಬ್ಬರ ಕೈಯಲ್ಲಿ ನೀರು ತುಂಬಿರುವ ಬೆಳ್ಳಿ ಜೊಂಬು. ಅವರೆದುರು ಹಗ್ಗದ ಮೇಲೆ ಮಧ್ಯೆ ಮಧ್ಯೆ ದೊಡ್ಡ ದೊಡ್ಡ ಕಂಡಿಗಳಾಗಿ ಪ್ರಪಂಚದ ಆರೂ ಖಂಡಗಳ ನೆನಪು ತರುವ ಹಾಗೆ ಬಟ್ಟೆ ಕಳೆದುಕೊಂಡು ಅವಶೇಷವಾಗಿರುವ ಎರಡೂ ಸೀರೆಗಳು; ವಠಾರದ ಬಾಗಿಲ ಹತ್ತಿರ ನಿಧಾನಕ್ಕೆ ಬಾಯಿ ಆಡಿಸಿಕೊಂಡು, ಸೀರೆಯಂಚನ್ನು ಕೊಂಬಿಗೂ ಸುತ್ತ ಸಿಕ್ಕಿಸಿಕೊಂಡು ಬಾಯಲ್ಲಿ ಉಳಿದಿರುವ ಸೀರೆಯ ತುಂಡನ್ನು ಗಂಟಲೊಳಗೆ ಎಳೆದುಕೊಳ್ಳಲು ಯತ್ನಿಸುತ್ತಿರುವ ಎಮ್ಮೆ! ಎರಡೂ ಸೀರೆಗಳನ್ನು ಪೂರ್ತಿ ತಿಂದು ಮುಗಿಸಲು ಇವರು ಅವಕಾಶ ನೀಡಲಿಲ್ಲವಲ್ಲಾ ಎಂಬಂತಹ ಕೋಪ ಎಮ್ಮೆಯಲ್ಲಿ ಕಾಣಲಿಲ್ಲ; ಬದಲಿಗೆ ಒಂದು ರೀತಿಯ ನಿರ್ಲಿಪ್ತತೆ ಎದ್ದು ತೋರುತ್ತಿತ್ತು. ಸಿಕ್ಕಷ್ಟು ಸೀರುಂಡೆ ಎಂಬಂತೆಯೋ ಪಾಲಿಗೆ ಬಂದದ್ದು ಪಂಚಾಮೃತ ಎಂಬ ಹಾಗೆಯೋ ಒಂದು ರೀತಿಯ ಸ್ಥಿತಿ ಪ್ರಜ್ಞನ ಮನೋಭಾವದಿಂದ ನಿಧಾನಕ್ಕೆ ಹೆಜ್ಜೆ ಹಾಕುತ್ತಾ ಹೊರಟಿರುವ ಎಮ್ಮೆ!

ನನ್ನನ್ನ ಕಂಡ ಕೂಡಲೆ ಅಮ್ಮ ಅಜ್ಜಿ ಇಬ್ಬರಿಗೂ ಕೋಪ ಬಂತು. ವಿಶಿಷ್ಟವಾದ ಕೆಲವು ಬೈಗುಳದ ನಂತರ ನಿನ್ನಿಂದ ಎಂತಹ ರೇಷ್ಮೆ ಸೀರೆ ಹಾಳಾಯಿತಲ್ಲೋ? ನಿಮ್ಮ

ತಾತ ಅದೆಷ್ಟು ಇಷ್ಟಪಟ್ಟು ಧರ್ಮಾವರದಿಂದ ಅದನ್ನು ತರಿಸಿದ್ದರು? ಆ ಕಾಲದಲ್ಲೇ ಹದಿನಾರು ರೂಪಾಯಿ ಒಂಬತ್ತು ಆಣೆ ಆರುಕಾಸು ಕೊಟ್ಟಿದ್ದೆವು ಇದಕ್ಕೆ... ಅಂತ ಅಜ್ಜಿ ತನ್ನ ಗೋಳು ತೋಡಿಕೊಂಡಿತು; ಎಂತಹಾ ಒಳ್ಳೇ ಸೀರೆ ಅದು? ಆರು ವರುಷದಿಂದ ಉಡ್ತಿದ್ದೆ. ಹರವಿದ ಹತ್ತೇ ನಿಮಿಷಕ್ಕೆ ಒಣಗುತ್ತಿತ್ತು. ಅದು ಇದ್ದದ್ದರಿಂದಲೇ ದಿವಸಕ್ಕೆ ಇಪ್ಪತ್ತು ಸಲ ಮಡಿ ಉಟ್ಟುಕೋಬಹುದಿತ್ತು. ಅಂತ ಅಮ್ಮ ತನ್ನ ಸೀರೆಯ ಗುಣಗಾನ ನಡೆಸಿದ್ದಳು. ಅಳಿದುಳಿದಿದ್ದ ಅಮ್ಮನ ಸೀರೆಯನ್ನ ಸಾರಿಸುವ ಬಟ್ಟೆ ಮಾಡಬಹುದು ಅಂತ ನನ್ನ ಕೈಲೇ ತೆಗೆದಿರಿಸಿದರು. ರೇಷ್ಮೆ ಸೀರೇನ ಮಾತ್ರ - ಅದೂ ಎಮ್ಮೆ ತಿಂದು ಉಳಿದದ್ದು ಅಜ್ಜಿಯೇ ಜೋಪಾನವಾಗಿ ತೆಗೆದಿರಿಸಿತು. ರೇಷ್ಮೆಗೆ ಮೈಲಿಗೆ ಇಲ್ಲವಂತೆ ಮತ್ತು ಅದರ ಜರಿಗಳಲ್ಲಿ ಚಿನ್ನದ ದಾರ ಪೋಣಿಸಿರುತ್ತಾರೆ - ಅದನ್ನ ಮಾರಿದರೆ ದುಡ್ಡು ಸಿಗುತ್ತೆ ಅಂತ ಅಮ್ಮ ಅಜ್ಜಿ ಮಾತಾಡಿಕೊಂಡಿದ್ದೂ ಕೇಳಿಸಿಕೊಂಡೆ.

ಈ ಎಮ್ಮೆ ಪ್ರಸಂಗ ಇಲ್ಲಿ ಯಾಕೆ ಬಂತು ಅಂದರೆ ಇದು ಹಿನ್ನೆಲೆಗೆ ಒಂದು ಹಿನ್ನೆಲೆ. ಈಚಿನ ಸಿನಿಮಾಗಳಲ್ಲಿ Flashback ಒಳಗೆ ಮತ್ತೊಂದು Flashback ಇರುತ್ತೆ ನೋಡಿ ಅದರ ಹಾಗೇನೇ! ಈ ಹಿನ್ನೆಲೆ ನಿಮ್ಮ ಮನಸ್ಸಿನಲ್ಲಿರಲಿ.

ಬೇಸಿಗೆ ರಜಾ ಮುಗಿಯಿತು. ಮತ್ತೆ ಶಾಲೆ ಆರಂಭವಾಯಿತು. ಶಾಲೆ ಆರಂಭವಾದ ಎರಡನೇ ದಿವಸವೇ ಒಬ್ಬರು ಹೊಸಾ ಮೇಸ್ಟರು ಬಂದರು. ವೆಂಕುರಾಯರು ಅಂತ ಅವರ ಹೆಸರು, ಖುರ್ಚಿಯ ಮೇಲೆ ಕೂತರು 'ಎಲ್ಲರೂ ಎಮ್ಮೆ ನೋಡಿದೀರಾ?...' ಅಂತ ಕೇಳಿದರು. 'ಹೂಂ ಸಾ...' ಅಂತ ಒಕ್ಕೊರಲಿನಿಂದ ಉತ್ತರಿಸಿದೆವು. ವೆರಿಗುಡ್! ಎಮ್ಮೆ ಮೇಲೆ ಒಂದು ಪ್ರಬಂಧ ಬರೆಯಿರಿ. ಅಂತ ಹೇಳಿ ಕಣ್ಣು ಮುಚ್ಚಿದರು.

ಪ್ರಬಂಧ ಅಂದರೇನು ಅಂತ ಆಗ ತಿಳಿದಿರಲಿಲ್ಲ. ಎಮ್ಮೆ ಬೆನ್ನು ಹದವಾಗಿರುತ್ತೆ ಅಂತ ಗೊತ್ತಿತ್ತು. ಆದರೆ ಅದರ ಮೇಲೆ ಪೆನ್ಸಿಲ್ಲಿನಲ್ಲಿ ಬರದರೆ ಅದು ಕಾಣುತ್ತದೆಯೇ ಅಥವಾ ಆ ರೀತಿ ಬರೆಯುವುದು ಸಾಧ್ಯವೇ ಅಂತ ತಿಳಿದಿರಲಿಲ್ಲ. ಅದಕ್ಕಿಂತಲೂ ಗೊಂದಲ ಉಂಟು ಮಾಡಿದ್ದು ಅಂದರೆ ಇಡೀ ತರಗತಿಯ ವಿದ್ಯಾರ್ಥಿಗಳೆಲ್ಲ ಎಮ್ಮೆಯ ಮೇಲೆ ಬರಿಯಬೇಕು ಅಂದರೆ ಹತ್ತಿರದ ಮೈದಾನದಿಂದ ಅದೆಷ್ಟು ಎಮ್ಮೆಗಳನ್ನ ತರಬೇಕು? ಅವನ್ನ ತರಗತಿಯಲ್ಲಿ ತುಂಬುವುದು ಹೇಗೆ? ಎಮ್ಮೆ ಮೇಲೆ ಸೀಮೆಸುಣ್ಣದಿಂದ ಬರೆಯಬಹುದೇ ಅಷ್ಟೊಂದು ಸೀಮೆ ಸುಣ್ಣ ಅದೆಲ್ಲಿಂದ ತರುವುದು?

'ಸಾರ್' ಅಂದೆ ಮೆಲ್ಲಗೆ.

'ಅದೇನೋ?' ಅಂತ ಕೇಳಿದರು ಮೇಷ್ಟರು.

'ಸಾರ್ ಪ್ರಬಂಧ ಅಂದರೆ ಏನು ಅಂತ ಗೊತ್ತಿಲ್ಲ ಸಾರ್. ಎಮ್ಮೆ ಮೇಲೆ ಪೆನ್ಸಿಲ್ಲಿನಲ್ಲಿ ಬರೆದರೆ ಅದು ಕಾಣುತ್ತೇ ಸಾರ್? ಅಷ್ಟೊಂದು ಎಮ್ಮೆಗಳನ್ನ ಕ್ಲಾಸಿಗೆ ಅದು ಹೇಗೆ ಸಾರ್ ತರೋದು?...' ನನ್ನ ತಲೆ ಕೊರೆಯುತ್ತಿದ್ದ ಸಮಸ್ಯೆಗಳನ್ನ ಅವರಿಗೆ ಅಂಟಿಸಿದೆ.

ಮೇಷ್ಟ್ರು ಕೆಂಪಗಾದರು. ಮರುಕ್ಷಣವೇ ಘೊಳ್ ಅಂತ ನಕ್ಕರು.

'ಹೋ ಇಂಥಾ ಬುದ್ಧಿವಂತರೂ ಈ ಕ್ಲಾಸಿನಲ್ಲಿ ಇದೀರೋ? ಎಮ್ಮೆ ಬಗ್ಗೆ ನಿಮಗೆ ತಿಳಿದುರೋದು ಕಾಗದದಲ್ಲಿ ಬರೀ ಅಂದೇ ಪ್ರಬಂಧ...' ಎಂದು ಹೇಳಿದರು. ಸರಿ ಅಂತ ತಲೆ ಆಡಿಸಿದೆವು. ಹೀಗೆ ನಾನು ಹೊಸೆದ ಮೊದಲ ಪ್ರಬಂಧ ಅವತ್ತು ಹುಟ್ಟಿತು. ಎಮ್ಮೆ ಮೇಲಿನ ಪ್ರಬಂಧವನ್ನ ಹೀಗೆ ಬರೆದಿದ್ದೆ. ಎಮ್ಮೆಗೆ ನಾಲ್ಕು ಕಾಲುಗಳಿವೆ. ಎರಡು ದೊಡ್ಡ ಕಣ್ಣುಗಳು ಮುಖದಲ್ಲಿವೆ. ಎಮ್ಮೆಗೆ ಒಂದು ಬಾಲ ಇದೆ. ಒಂದು ದೊಡ್ಡ ಹೊಟ್ಟೆ ಇದೆ. ಅದಕ್ಕೆ ಎರಡು ಕೊಂಬುಗಳಿವೆ ಕೆಲವಕ್ಕೆ ಕೊಂಬು ನೇರ ಇದ್ದರೆ ಮತ್ತೆ ಕೆಲವಕ್ಕೆ ಸೊಟ್ಟ ಇರುತ್ತವೆ. ಎಮ್ಮೆ ಹಾಲು ಕೊಡುತ್ತದೆ. ಎಮ್ಮೆ ಸಗಣಿ ಹಾಕುತ್ತದೆ. ಮನುಷ್ಯರಿಗೆ ಇರುವಂತೆ ಎಮ್ಮೆಗೆ ಮೂಗು ಇಲ್ಲ. ಬಾಯಿಯ ಮೇಲೆ ಎರಡು ಕಂಡಿಗಳಿದ್ದು ಅದರಿಂದ ಅದು ಉಸಿರಾಡುತ್ತದೆ. ಎಮ್ಮೆಗೆ ಕೆಚ್ಚಲು ಇದೆ - ಅದರಿಂದ ಹಾಲು ಕರೆಯುತ್ತಾರೆ. ಕೆಲವು ಎಮ್ಮೆಗಳು ಕೆಸರಿನ ಬಣ್ಣದ್ದೂ ಇರುತ್ತದೆ. ಎಮ್ಮೆಗೆ ಕೆಸರು ಅಂದರೆ ಇಷ್ಟ- ಅವು ಕೆಸರಿನಲ್ಲಿ ಆಡುತ್ತವೆ. ಕೆಲವು ಎಮ್ಮೆಗಳಿಗೆ ಕೆಚ್ಚಲುಗಳು ಇಲ್ಲ - ಅವುಗಳನ್ನು ಕೋಣ ಎಂದು ಕರೆಯುತ್ತಾರೆ. ಎಮ್ಮೆ ಹುಲ್ಲು ತಿನ್ನುತ್ತೆ; ಒಣಗಿ ಹಾಕಿರುವ ಹಪ್ಪಳ ಸಂಡಿಗೆ ತಿನ್ನುತ್ತೆ; ಹರವಿರುವ ರೇಷ್ಮೆ ಸೀರೆ ಮಡಿಬಟ್ಟೆ ತಿನ್ನುತ್ತೆ. ಎಮ್ಮೆ ಬಹಳ ಸಾಧುವಾದ ಪ್ರಾಣಿ - ಹೊಡೆದರೆ ಹೊಡೆಸಿಕೊಳ್ಳುತ್ತೆ ಅದನ್ನು ಓಡಿಸಬೇಕಾದರೆ ಚೆಂಬಿನಿಂದ ಮತ್ತು ಪಂಚಪತ್ರೆಯಿಂದ ನೀರನ್ನು ನಾವು ದೂರ ನಿಂತು ಅದರ ಮೇಲೆ ಎರಚಬೇಕು. ಎಮ್ಮೆ ಚಿಕ್ಕದಾಗಿದ್ದರೆ ಅದಕ್ಕೆ ಕರು ಎಂದು ಹೇಳುತ್ತಾರೆ. ಇದು ಎಮ್ಮೆಯ ಮೇಲಿನ ಪ್ರಬಂಧ ಅಂತ ಬರೆದಿದ್ದೆ.

ವೆಂಕಟರಾಯರು ಪ್ರಬಂಧದ ಹಾಳೆ ತಮ್ಮ ಬಳಿಗೆ ತೆಗೆದುಕೊಂಡರು. ಕ್ಲಾಸಿನಲ್ಲಿ ನನ್ನ ಪ್ರಬಂಧ ಓದಿದರು. ಮಧ್ಯೆ ಮಧ್ಯೆ ಅದೇಕೋ ಅವರಿಗೆ ನಗು. ಒಂಬತ್ತು ನಂಬರು ಕೊಟ್ಟು ಪ್ರಬಂಧದ ಹಾಳೆ ಹಿಂದಕ್ಕೆ ಕೊಟ್ಟರು. ಅದನ್ನ ಹರಿದು ಎಸೀಬೇಕು ಅಂತ ಆಗ ನನಗೆ ಅನಿಸಲಿಲ್ಲ. ಇದು ನನ್ನ ಜೀವನದ ಮೊದಲ ತಪ್ಪು. ಹಾಳೆ ಮನೇಗೆ ತಂದೆ ಅಮ್ಮನಿಗೆ ಆದನ್ನ ಕೊಟ್ಟೆ. ಒಂಬತ್ತು ನಂಬರು ಬಂದಿದೆ ಅಂತ

ಸಂಭ್ರಮದಿಂದ. ಇದು ಜೀವನದಲ್ಲಿ ನಾನು ಮಾಡಿದ ಎರಡನೇ ತಪ್ಪು. ಅಮ್ಮ ಓದಲು ಆರಂಭಿಸಿದಳು. ಒಂದೇ ಕ್ಷಣದಲ್ಲಿ ಪಕ ಪಕನೆ ನಗಲು ಶುರು ಮಾಡಿದಳು. ಪ್ರಬಂಧ ಮುಗಿಸೋ ಹೊತ್ತಿಗೆ ಹದಿನಾರು ಸಲ ನಕ್ಕಿದ್ದಳು. ನಂತರ ಅಜ್ಜೀನ ಕರೆದಳು. ಇಬ್ಬರೂ ಸೇರಿ ಮೂವತ್ತೆರಡು ಸಲ ನಕ್ಕರು. ಎಮ್ಮೆ ಸಂಡಿಗೆ ತಿನ್ನುತ್ತಂತೆ, ಮಡಿ ಸೀರೆ ತಿನ್ನುತ್ತಂತೆ. ಎಮ್ಮೆಗೆ ಕೆಚ್ಚಲು ಇಲ್ಲ ಅಂದರೆ ಅದಕ್ಕೆ ಕೋಣ ಅಂತ ಅಂತಾರಂತೆ. ಎಮ್ಮೇನ ಓಡಿಸಬೇಕಾದರೆ ಅದರ ಮೇಲೆ ನೀರು ಎರಚಬೇಕಂತೆ. ನಗೆ ಅಲೆ ಅಲೆಯಾಗಿ ಹೊರಟಿದ್ದು ಸುಮಾರು ವರ್ಷ ನಿಲ್ಲಲೇ ಇಲ್ಲ. ತಂದೆ ಮನೆಗೆ ಬಂದ ಕೂಡಲೇ ಅವರೆದುರು ಈ ಎಮ್ಮೆ ಪ್ರಬಂಧ ಮತ್ತೆ ಮಂಡನೆ ಆಯಿತು. ಅಲ್ಲಿಂದ ಸುಮಾರು ಇಪ್ಪತ್ತು ಮುವತ್ತು ವರ್ಷ ಮನೆಗೆ ಯಾರೇ ಬರಲಿ, ಅವರೆದುರು ಈ ಎಮ್ಮೆ ಪ್ರಬಂಧದ ವಾಚನ ಆಗುತ್ತಿತ್ತು. ನಮ್ಮ ನೆಂಟರುಗಳು ಸೇರಿದ ಕಡೆ ಇದೊಂದು ದೊಡ್ಡ Joke ಆಗಿ ನನ್ನನ್ನ ಎಲ್ಲರೂ 'ಎಮ್ಮೆ ಗೋಪಿ' ಅಂತಲೇ ಕರೀತಿದ್ದರು. ನನ್ನ ಮದುವೆ ನಂತರವೂ ಈ ವಿಷಯ ಸಾಂಕ್ರಾಮಿಕ ರೋಗದ ಹಾಗೆ ಹರಡಿ ನನ್ನ ಹೆಂಡತಿ ಕಡೆಯವರು ನನ್ನ ವಿಷಯ ಮಾತಾಡಬೇಕಾದರೆ ಅದೇ ಎಮ್ಮೆ ಸಂಡಿಗೆ ಅವರೇ ಅಂತ ನನಗೆ ತಿಳಿಯದ ಹಾಗೆ ಮಾತಾಡಿದ್ದೂ ನನಗೆ ನೆನಪಿದೆ.

ಬಹಳ ಸೀರಿಯಸ್ಸಾಗಿ ಬರೆದ ಒಂದು ಪ್ರಬಂಧದಿಂದ ಇಡೀ ವಂಶದವರ ಮುಂದೆ ನಾನು A Matter of Laughter, Joke ಆಗಿ ಜೋಕರ್ ಆಗಿ ನಗುವಿನ, ಹಾಸ್ಯದ ಕೊಂಕಿ, ಅಪಹಾಸ್ಯದ - ಊಹುಂ ಇಲ್ಲ ಅಪಹಾಸ್ಯ ಅಂತ ಹೇಳಲಾರೆ ಕೊಂಕಿನ ವಸ್ತುವಾಗಿ ಮಾರ್ಪಾಟಾಗಿಬಿಟ್ಟಿದ್ದೆ.


ನೆಂಟರು ಸಭೆ ಸಮಾರಂಭಗಳಿಗೆ ಗುಂಪು ಸೇರಿದಾಗ ಅದು ಯಾರೋ ಅದು ಹೇಗೋ ಎಮ್ಮೆ ವಿಷಯ ತೆಗೆಯುತ್ತಿದ್ದರು - ನಾನು ಕೂಡಲೇ ಪರಾರಿ ಆಗುತ್ತಿದ್ದೆ. ನನ್ನಾಕೆಯ ಕಡೆಯವರಂತೂ ರಸ್ತೆಯಲ್ಲಿ ನಿಧಾನವಾಗಿ ಚಲಿಸುತ್ತಿರುವ ಎಮ್ಮೆಯನ್ನು ತೋರಿಸಿ 'ಅದು ಎಮ್ಮೆಯೋ ಅದು ಕೋಣವೋ ಗೋಪೀ?' ಎಂದು ಕೇಳಿ ಖುಷಿ ಪಡುತ್ತಿದ್ದರು.


ಎಲ್ಲರ ಹಾಸ್ಯ, ಕುಚೋದ್ಯಕ್ಕೆ ನಾನು ಕಾರಣ ಆಗಿದ್ದು ಈ ಅಮ್ಮ ಅಜ್ಜಿಯರಿಂದಲೇ ಅಂತ ಅದೆಷ್ಟು ಸಲ ಕೋಪ ಬಂದಿದೆ ಗೊತ್ತೇ? ಎಲ್ಲರೆದುರು ಈ ಸಂಬಂಧದ ಪಾಠ ಅಮ್ಮ ವಾಚಿಸಿದ್ದು ಕೇಳಿ ಕೇಳಿ ನನ್ನ ಮನಸ್ಸಿನಲ್ಲಿ ಅಚ್ಚು ಹೊಡೆದ ಹಾಗೆ ಮೂಡಿದೆ: ಹಲವಾರು ಸಾವಿರ ನೆಂಟರ ನಗೆಗೆ ಕಾರಣವಾಗಿದೆ. ಅಚ್ಚು ಕಾಣದಿದ್ದರೂ ಎಷ್ಟು ಲೇಖನಗಳಿಗೆ ಇಂತಹ ಅವಕಾಶ ಸಿಕ್ಕಿದೆ ಹೇಳಿ? ಇಂತಹ ಅದೃಷ್ಟವಿದೆ ಹೇಳಿ?

ನನ್ನವರೆದುರು ನಗುವಿಗೆ ಕಾರಣರಾದ ಅಮ್ಮ ಅಜ್ಜಿಯರ ಬಗೆಗೆ ಈಚೆಗೆ ಒಂದು ರೀತಿಯ ಅಭಿಮಾನ ಹುಟ್ಟಿದೆ. ಮೊದಲ ಪ್ರಬಂಧ ಮಾಸಿ ಹೋಗದಿರಲು ಅವರ ಕಾಣಿಕೆ ಕಡಿಮೆಯೇ? ಎಷ್ಟು ಕೋಟಿ ಕೋಟಿ ಅಮ್ಮಂದಿರು ಇಂತಹ ಕೊಡುಗೆ ನೀಡಿದ್ದಾರೆ. ನನ್ನ ಅಮ್ಮ ಒಬ್ಬರನ್ನು ಬಿಟ್ಟು?

ಈಗಲೂ ಸಹ ಎಮ್ಮೆ ಪ್ರಬಂಧ ಓದಿದವರು - ನನ್ನ ಮಕ್ಕಳು ಮೊಮ್ಮಕ್ಕಳು ಇತ್ಯಾದಿ - ನಗ್ತಾರೆ ಎಂದರೆ ಅದರ ಹಿರಿಮೆ ಬಲ್ಲವರಾರು?

ಎಮ್ಮೆ ವಿಶ್ವಾಮಿತ್ರ ಸೃಷ್ಟಿಯಂತೆ. ಈ ಕಾರಣದಿಂದ ನಮ್ಮ ಪೂರ್ವಿಕರು ಎಮ್ಮೆ ಹಾಲು ಕುಡೀತಿರಲಿಲ್ಲವಂತೆ! ಈಗಲೂ ಸಹ ಸಿಟಿಯವರಿಗೆ ಎಮ್ಮೆ ಹಾಲು ಅಂದರೇನು ಅಂತ ತಿಳೀದು. ಎಮ್ಮೇನ ಬ್ರೇಕ್ ಇನ್ಸ್‌ಪೆಕ್ಟರ್ ಅಂತ ಕರೀತಾರಂತೆ. ಒಂದು ಅತಿ ಸಣ್ಣ ನೆನಪು ಇಡೀ ಜೀವನವನ್ನು ಆವರಿಸಿಕೊಂಡು ಹಿಂಸೆ, ಖುಷಿ ಕೊಡೋದು ಅಂದರೆ ಅದೆಂತಹ ಮಜಾ ಅಲ್ಲವೇ?




STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR